ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

¸ÀA¥ÀÆgÀ -156 Volume - 156	ಬೆಂಗಳೂರು, ಶುಕ್ರವಾರ, 17, ಡಿಸೆಂಬರ್, 2021(ಮಾರ್ಗಶಿರ, 26, ಶಕವರ್ಷ, ೧೯೪3) BENGALURU, FRIDAY, 17, DECEMBER, 2021(MARGASHIRA, 26, SHAKAVARSHA, 1943)	¸ÀaPÉ203 Issue 203

--ÁUÀ¶

gÁdå ¸ÀÄðgÀÄ²ÃRå DzÉÃ±ÀÀÄºÁUÀÄ ¸ÀvÉÃÉ²ÃAvÁzÀ J¯Á E¯ÁSÉÃUÀÄ ¸ÀSÁ¢üzÀDzÉÃ±ÀÀÄ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಬಿ.ವೈ.ಜುಮ್ನಾಳ್, ಮುಖ್ಯ ಇಂಜಿನಿಯರ್(ನಿವೃತ್ತ) ಇವರು ದಿನಾಂಕ: 22/02/2014 ರಿಂದ ದಿನಾಂಕ: 22/09/2015ರವರೆಗಿನ ಸರ್ಕಾರದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿ ಸಂಬಂಧ ದಂಡನೆಯನ್ನು ವಿಧಿಸುವ ಕುರಿತು

ಓದಲಾಗಿದೆ:

1. ಕಾರಣ ಕೇಳುವ ನೋ ಟೀಸ್ ಸಂಖ್ಯೆ: ಸಿಆಸುಇ 10 ಇಮುವಿ 2014, ದಿನಾಂಕ: 03/09/2015.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 10 ಇಮುವಿ 2014, ದಿನಾಂಕ: 20/10/2016.
3. ದಿನಾಂಕ: 04/09/2017ರ ವಿಚಾರಣಾಧಿಕಾರಿಯವರ ವರದಿ.
4. ಉಚ್ಚ ನ್ಯಾಯಾಲಯ, ಗುಲ್ಬರ್ಗಾ ಪೀಠ ಇಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ: 202211/2014ರಲ್ಲಿ ಮಾನ್ಯ ನ್ಯಾಯಾಲಯದ ಆದೇಶ ದಿನಾಂಕ: 19/02/2014
5. 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಸಿಆಸುಇ 10 ಇಮುವಿ 2014, ದಿನಾಂಕ: 03/08/2018
6. 2ನೇ ಕಾರಣ ಕೇಳುವ ನೋಟೀಸಿಗೆ ಶ್ರೀ ಬಿ.ವೈ. ಜುಮ್ನಾಳ್, ನಿವೃತ್ತ ಮುಖ್ಯ ಇಂಜಿನಿಯರ್ ಇವರು ದಿನಾಂಕ: 09/07/2019ರಂದು ನೀಡಿದ್ದ ಸಮಜಾಯಿಷಿ.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಕಾರಣ ಕೇಳುವ ನೋಟೀಸಿನಲ್ಲಿ ಶ್ರೀ ಬಿ.ವೈ.ಜುಮ್ನಾಳ್, ಮುಖ್ಯ ಇಂಜಿನಿಯರ್(ನಿವೃತ್ತ) ಇವರು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 67 ಸೇಮುಇ 2013(ಭಾಗ-4), ದಿನಾಂಕ: 28/12/2013 ಹಾಗೂ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 202211/2014ರಲ್ಲಿ ದಿನಾಂಕ: 19/02/2014ರಂದು ನೀಡಿದ ಆದೇಶದಂತೆ ಮುಖ್ಯ ಇಂಜಿನಿಯರ್, ಮಲಪ್ರಭಾ ಯೋಜನಾ ವಲಯ, ಧಾರವಾಡ ಹುದ್ದೆಯ ಪ್ರಭಾರವನ್ನು ವಹಿಸಿಕೊಳ್ಳದೇ ಸರ್ಕಾರದ ಆದೇಶವನ್ನು ನಿರ್ಲಕ್ಷಿಸಿ ದಿನಾಂಕ: 22/02/2014ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿಯಾಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಸದರಿಯವರು ಯಾವುದೇ ರೀತಿಯ ರಜೆ ಮಂಜೂರಾತಿಗಾಗಿ ಪ್ರಸ್ತಾವನೆಯನ್ನಾಗಲಿ, ಸಿಆಸು ಇಲಾಖೆಗೆ ಯಾವುದೇ

ಮಾಹಿತಿಯನ್ನಾಗಲಿ ನೀಡಿರುವುದಿಲ್ಲ ಮತ್ತು ಈ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ-106 ಹಾಗೂ 108ರ ನಿಯಮ ಉಲ್ಲಂಘಿಸಿ ಅನಧಿಕೃತ ಗೈರು ಹಾಜರಾಗಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-11ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಆಪಾದಿತರ ವಿರುದ್ಧದ ಆರೋಪಗಳ ಕುರಿತು ದೋಷಾರೋಪಣಾ ಪಟ್ಟಿ ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ (2)ರ ಆದೇಶದಲ್ಲಿ ಶ್ರೀ ಬಿ.ವೈ.ಜುಮ್ನಾಳ್, ನಿವೃತ್ತ ಮುಖ್ಯ ಇಂಜಿನಿಯರ್ ಇವರಿಗೆ ಅನೇಕ ಅವಕಾಶಗಳನ್ನು ನೀಡಿದ ಹೊರತಾಗಿ ದಿನಾಂಕ: 03/09/2015ರ ಕಾರಣ ಕೇಳುವ ನೋಟೀಸಿಗೆ ಸಂಬಂಧಿಸಿದಂತೆ ಅಧಿಕಾರಿಯವರು ಯಾವುದೇ ಸಮಜಾಯಿಷಿ/ಹೇಳಿಕೆ ಸಲ್ಲಿಸಿರುವುದಿಲ್ಲ. ಆದಕಾರಣ ಶಿಸ್ತು ಪ್ರಾಧಿಕಾರವಾದ ಸರ್ಕಾರವು ಪ್ರಕರಣದ ಸತ್ಯಾಸತ್ಯತೆಗಳನ್ನು ತಿಳಿಯಲು ವಿವರವಾದ ವಿಚಾರಣೆ ಅಗತ್ಯವೆಂದು ಪರಿಗಣಿಸಿ ಶ್ರೀ ಬಿ.ವೈ.ಜುಮ್ನಾಳ್, ನಿವೃತ್ತ ಮುಖ್ಯ ಇಂಜಿನಿಯರ್ ಇವರು ದಿನಾಂಕ: 22/02/2014 ರಿಂದ ದಿನಾಂಕ: 22/09/2015ರವರೆಗಿನ ಸರ್ಕಾರದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿಯಾದ ಆರೋಪಕ್ಕೆ ಸಂಬಂಧಿಸಿದಂತೆ ಹಾಗೂ ದಿನಾಂಕ: 03/09/2015ರ ಕಾರಣ ಕೇಳುವ ನೋಟೀಸಿನಲ್ಲಿ ಮಾಡಲಾಗಿರುವ ಆರೋಪಗಳ ಬಗ್ಗೆ ಸರ್ಕಾರವು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(2)(ಎ)ರಲ್ಲಿನ ಅವಕಾಶಗಳಡಿಯಲ್ಲಿ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 11(2)ರಡಿಯಲ್ಲಿ ವಿಚಾರಣಾಧಿಕಾರಿಯವರನ್ನು ನೇಮಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (3)ರಲ್ಲಿ ವಿಚಾರಣಾಧಿಕಾರಿಯವರ ವಿಚಾರಣಾ ವರದಿಯಲ್ಲಿ ì ಶ್ರೀ ಬಿ.ವೈ. ಜುಮ್ನಾಳ್ ರವರು ತಮಗೆ ಸ್ಥಳ ನಿಯುಕ್ತಿ ಮಾಡುವಂತೆ ಅನೇಕ ಸಲ ಸರ್ಕಾರವನ್ನು ಕೇಳಿಕೊಂಡಿದ್ದು, ಸಕಾಲದಲ್ಲಿ ಸರ್ಕಾರದಿಂದ ಯಾವುದೇ ಹೊಸ ಆದೇಶ ಹೊರಡಿಸದೇ ಇದ್ದ ಕಾರಣ ಅಧಿಕಾರಿಯು ಅನಧಿಕೃತ ಗೈರು ಹಾಜರಿಯಾಗಿ ಉಳಿದಿದ್ದರು ಎನ್ನುವುದು ನ್ಯಾಯಸಮ್ಮತವಾಗದೇ ಆ ಅವಧಿಯು ಕಡ್ಡಾಯ ಕಾಯುವ ಅವಧಿ ಆಗುತ್ತದೆಂದು ತಿಳಿಸಿರುತ್ತಾರೆ. ಸರ್ಕಾರದಿಂದ ಶ್ರೀ ಬಿ.ವೈ ಜುಮ್ನಾಳ್ ಇವರನ್ನು ಮಲಪ್ರಭಾ ಯೋಜನಾ ವಲಯ, ಧಾರವಾಡಕ್ಕೆ ಮುಖ್ಯ ಇಂಜಿನಿಯರಾಗಿ ವರ್ಗಾವಣೆ ಮಾಡಿದ್ದ ದಿನಾಂಕ: 28/12/2013ರ ಆದೇಶವನ್ನು ಹಿಂದಕ್ಕೆ ಪಡೆದ ಕಾರಣ ಧಾರವಾಡದಲ್ಲಿ ಪ್ರಭಾರವನ್ನು ವಹಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ ಹಾಗೂ ಶ್ರೇಷ್ಠ ನ್ಯಾಯಾಲಯವು ಆಪಾದಿತರಿಗೆ ಮಲಪ್ರಭಾ ಯೋಜನಾ ವಲಯ ಧಾರವಾಡ ಹುದ್ದೆಯಲ್ಲಿ ಪ್ರಭಾರ ವಹಿಸಿಕೊಳ್ಳುವಂತೆ ಸ್ಪಷ್ಟ ಆದೇಶ ಮಾಡಿರುವುದಿಲ್ಲ. ಹೀಗಾಗಿ ನ್ಯಾಯಾಲಯದ ಆದೇಶ ಪಾಲಿಸಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ ಎಂದು ವಿಶ್ಲೇಷಿಸಿ ಅಧಿಕಾರಿಯವರ ವಿರುದ್ಧದ ಆರೋಪಗಳು ಸಾಬೀತಾಗಿರುವುದಿಲ್ಲವೆಂದುÎ ವರದಿಯನ್ನು ನೀಡಿರುತ್ತಾರೆ.

ಮೇಲೆ ಓದಲಾದ (4)ರಲ್ಲಿ ಶ್ರೀ ಪ್ರಮೋದರೆಡ್ಡಿ ಪಾಟೀಲ್, ಅಂದಿನ ಮುಖ್ಯ ಇಂಜಿನಿಯರ್ ರವರು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 67 ಸೇಮುಇ 2013(ಭಾಗ-4), ದಿನಾಂಕ: 10/01/2014ನ್ನು ರದ್ದುಪಡಿಸುವಂತೆ ಕೋರಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಇಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ: 467/2014ರಲ್ಲಿ ಮಾನ್ಯ ಆಡಳಿತ ನ್ಯಾಯಮಂಡಳಿಯು ದಿನಾಂಕ: 12/02/2014ರಂದು ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿರುವ ತೀರ್ಪನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯ, ಗುಲ್ಬರ್ಗಾ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ: 202211/2014ನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯನ್ನು ಇತ್ಯರ್ಥಪಡಿಸಿ, ಮಾನ್ಯ ಉಚ್ಚ ನ್ಯಾಯಾಲವು ದಿನಾಂಕ: 19/02/2014ರಂದು ನೀಡಿರುವ ತೀರ್ಪಿನ ಅನ್ವಯ ಶ್ರೀ ಪ್ರಮೋದರೆಡ್ಡಿ ಪಾಟೀಲ್ ಇವರು

ದಿನಾಂಕ:22/02/2014ರಂದು ಮುಖ್ಯ ಇಂಜಿನಿಯರ್, ಕೃಭಾಜನಿನಿ, ಕಾಲುವೆ ವಲಯ ಸಂಖ್ಯೆ:1, ಭೀಮರಾಯನ ಗುಡಿ ಹುದ್ದೆಯಲ್ಲಿ ಸ್ವಯಂ ಪ್ರಭಾರ ವಹಿಸಿಕೊಂಡಿರುತ್ತಾರೆ.

ಮೇಲೆ ಓದಲಾದ (5)ರ, ದಿನಾಂಕ: 03/08/2018ರ 2ನೇ ಕಾರಣ ಕೇಳುವ ನೋಟೀಸ್‌ನಲ್ಲಿ ತಾವು ಸಿಆಸು ಇಲಾಖೆಯಲ್ಲಿ ಕಾರ್ಯವರದಿ ಮಾಡಿಕೊಂಡಿರುವುದಿಲ್ಲ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ಪ್ರಕರಣವೂ ತಮ್ಮ ವೈಯಕ್ತಿಕ ಹಿತಾಸಕ್ತಿಗೆ ಸಂಬಂಧಿಸಿದ್ದು, ಯಾವುದೇ ಸಾರ್ವಜನಿಕ ಹಿತಾಸಕ್ತಿ ಇರುವುದಿಲ್ಲವಾದ್ದರಿಂದ ದಿನಾಂಕ: 22/02/2014 ರಿಂದ 20/09/2015ರವರೆಗೆ ಅಂದರೆ ಸುಮಾರು ಒಂದುವರೆ ವರ್ಷ ದೀರ್ಘಾವಧಿವರೆಗೆ ಸರ್ಕಾರದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ ದುರ್ನಡತೆ ಎಸಗಿದ್ದ ಆರೋಪವು ಸಾಬೀತಾಗಿರುವುದರಿಂದ ಸೂಕ್ತ ಸಮಜಾಯಿಷಿಯನ್ನು ನೀಡುವಂತೆ ತಿಳಿಸಲಾಗಿರುತ್ತದೆ.

ಮೇಲೆ ಓದಲಾದ (6)ರಲ್ಲಿ ಶ್ರೀ ಬಿ.ವೈ. ಜುಮ್ನಾಳ್, ನಿವೃತ್ತ ಮುಖ್ಯ ಇಂಜಿನಿಯರ್ ಇವರು ದಿನಾಂಕ: 09/07/2019 ರಂದು ಸರ್ಕಾರದ 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ ಎಂಬ ಕಾರಣಕ್ಕಾಗಿ ಒಂದೂವರೆ ವರ್ಷಗಳ ಅವಧಿಯವರೆಗೆ ಅನಧಿಕೃತ ಗೈರು ಹಾಜರಾಗಿ ದುರ್ನಡತೆ ಎಸಗಿರುವುದಾಗಿ ಆರೋಪಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 19/02/2014ರ ತೀರ್ಪಿನಂತೆ ಯಾವುದಾದರೊಂದು ಹುದ್ದೆಗೆ ನೇಮಿಸಿದ್ದಲ್ಲಿ ಅಥವಾ ಮಲಪ್ರಭಾ ಯೋಜನಾ ವಲಯ, ಧಾರವಾಡ ಇಲ್ಲಿಯೇ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ನಿರ್ದೇಶನ ನೀಡಿದ್ದಲ್ಲಿ, ಕರ್ತವ್ಯಕ್ಕೆ ಹಾಜರಾಗುತ್ತಿದ್ದೆನು ಎಂದು ತಿಳಿಸಿರುತ್ತಾರೆ. ಹಾಗೂ ವಿಚಾರಣಾಧಿಕಾರಿಗಳು ಕೂಲಂಕುಷವಾಗಿ ದಾಖಲಾತಿಗಳನ್ನು ಪರಿಶೀಲಿಸಿ, ಸಾಕ್ಷಿಗಳ ಹೇಳಿಕೆಗಳ ಎಲ್ಲಾ ಅಂಶಗಳನ್ನು ಪರಿಗಣಿಸಿ ಆರೋಪ ಸಾಬೀತಾಗಿಲ್ಲವೆಂದು ವರದಿ ಮಾಡಿರುತ್ತಾರೆ. ಹಾಗೂ ಸರ್ಕಾರಿ ಸೇವೆಯಿಂದ ವಯೋ ನಿವೃತ್ತನಾಗಿ ಮೂರುವರೆ ವರ್ಷಗಳು ಕಳೆದರೂ ತಮ್ಮ ನಿವೃತ್ತಿ ಸೌಲಭ್ಯಗಳು ಬಿಡುಗಡೆಯಾಗದ ಕಾರಣ ಆರ್ಥಿಕವಾಗಿ ಬಹಳ ಸಂಕಷ್ಟದಲ್ಲಿರುವುದಾಗಿ ತಿಳಿಸಿ, ವಿಚಾರಣಾಧಿಕಾರಿಯವರ ವರದಿಯನ್ನು ಒಪ್ಪಿ ತಮ್ಮನ್ನು ದೋಷಮುಕ್ತರನ್ನಾಗಿಸಿ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದ್ದು, ಶ್ರೀ ಬಿ.ವೈ.ಜುಮ್ನಾಳ್, ಮುಖ್ಯ ಇಂಜಿನಿಯರ್(ನಿವೃತ್ತ) ಇವರನ್ನು ವರ್ಗಾಯಿಸಿ ಆದೇಶಿಸಿದ್ದ ಮಲಪ್ರಭಾ ಯೋಜನಾ ವಲಯ, ಧಾರವಾಡ ಇಲ್ಲಿನ ಹುದ್ದೆಯಲ್ಲಿ ಸದರಿಯವರು ವರದಿ ಮಾಡಿಕೊಳ್ಳದೇ ಸರ್ಕಾರವು ತಮಗೆ ಯಾವುದೇ ಅಧಿಕೃತ ಸ್ಥಳ ನಿಯುಕ್ತಿ ಆದೇಶ ಅಥವಾ ನಿರ್ದೇಶನವನ್ನು ನೀಡಿಲ್ಲವೆಂದು ವಾದಿಸಿರುತ್ತಾರೆ. ಮಾನ್ಯ ನ್ಯಾಯಾಲಯದ ಆದೇಶದನ್ವಯ ವರ್ಗಾಯಿಸಿದ ಸ್ಥಳದಲ್ಲಿ ಅಂದರೆ ಮುಖ್ಯ ಇಂಜಿನಿಯರ್, ಕಾಲುವೆ ವಲಯ-1, ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತ, ಭೀಮರಾಯನ ಗುಡಿಯ ಹುದ್ದೆಯಲ್ಲಿ ಶ್ರೀ ಪ್ರಮೋದರೆಡ್ಡಿ ಪಾಟೀಲ್ ಇವರನ್ನೇ ಏಪ್ರಿಲ್ 2014ರವರೆಗೆ ಮುಂದುವರೆಸಿ, ತದನಂತರ ಅಧಿಕಾರಿಯವರನ್ನು ಅಲ್ಲಿಯೇ ಮುಂದುವರೆಸುವುದು ಅಥವಾ ಬೇರೆಡೆಗೆ ವರ್ಗಾಯಿಸುವ ಬಗ್ಗೆ ಸರ್ಕಾರ ನಿರ್ಣಯಿಸಬೇಕಾಗಿರುತ್ತದೆ.

ಶ್ರೀ ಪ್ರಮೋದರೆಡ್ಡಿ ಪಾಟೀಲ್ ಇವರನ್ನು ಕಾಲುವೆ ವಲಯ-1, ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತ, ಭೀಮರಾಯನ ಗುಡಿಯ ಹುದ್ದೆಯಿಂದ ವರ್ಗಾಯಿಸಿ ಆದೇಶ ಹೊರಡಿಸದಿದ್ದಲ್ಲಿ ಅವರು ಅಲ್ಲಿಯೇ ಮುಂದುವರೆಯಬೇಕೆಂದೆ ತಿಳಿಯತಕ್ಕದ್ದಾಗಿರುತ್ತದೆ. ಶ್ರೀ ಬಿ.ವೈ.ಜುಮ್ನಾಳ್, ಮುಖ್ಯ ಇಂಜಿನಿಯರ್(ನಿವೃತ್ತ) ರವರು ತಮಗೆ ಸ್ಥಳ ನಿಯುಕ್ತಿಗೊಳಿಸದಿದ್ದುದರಿಂದ ತಾವು ವರದಿ ಮಾಡಿಕೊಂಡಿಲ್ಲ ಎಂಬ ಅಂಶವನ್ನು ಒಪ್ಪಲು ಸಾಧ್ಯವಿರುವುದಿಲ್ಲ. ಅಲ್ಲದೇ, ಶ್ರೀ ಬಿ.ವೈ.ಜುಮ್ನಾಳ್, ಇವರು ತಮಗೆ ಸ್ಥಳ

ನಿಯುಕ್ತಿಗೊಳಿಸುವಂತೆಯಾಗಲಿ; ಅಥವಾ ಈ ಸಂಬಂಧ ನಿರ್ದೇಶನ ಕೋರಿಯಾಗಲೀ ಮನವಿ ಸಲ್ಲಿಸಿರುವುದಿಲ್ಲ. ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಕಾರ್ಯ ವರದಿ ಮಾಡಿಕೊಂಡಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಬಿ.ವೈ. ಜುಮ್ನಾಳ್, ಮುಖ್ಯ ಇಂಜಿನಿಯರ್(ನಿವೃತ್ತ) ಇವರು ದಿನಾಂಕ: 31/03/2016ರಂದು ಸರ್ಕಾರದ ಸೇವೆಯಿಂದ ವಯೋ ನಿವೃತ್ತಿ ಹೊಂದಿರುವುದರಿಂದ ಕರ್ನಾಟಕ ನಾಗರಿಕ ಸೇವಾ ನಿಯಮಗಳ ನಿಯಮ 214(1)(ಎ)ರಡಿಯ ಅವಕಾಶಗಳಡಿಯಲ್ಲಿ ಸರ್ಕಾರವು ದಂಡನೆ ವಿಧಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 10 ಇಮುವಿ 2014

ಬೆಂಗಳೂರು, ದಿನಾಂಕ: 05/03/2021.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಬಿ.ವೈ. ಜುಮ್ನಾಳ್, ನಿವೃತ್ತ ಮುಖ್ಯ ಇಂಜಿನಿಯರ್(ಸ್ವತಂತ್ರ ಪ್ರಭಾರ) ಇವರು ಸರ್ಕಾರದ ಸೂಚನೆ/ನಿರ್ದೇಶನವನ್ನು ಉಲ್ಲಂಘಿಸಿ, ದಿನಾಂಕ: 22/02/2014 ರಿಂದ ದಿನಾಂಕ: 20/09/2015ರವರೆಗೆ ಅನಧಿಕೃತ ಗೈರು ಹಾಜರಾಗಿರುವ ಆರೋಪದ ಸಂಬಂಧ ಕರ್ನಾಟಕ ನಾಗರಿಕ ಸೇವಾ ನಿಯಮಗಳ ನಿಯಮ 214(1)(ಎ)ರನ್ವಯ ನಿವೃತ್ತ ಅಧಿಕಾರಿಯವರ ನಿವೃತ್ತಿ ವೇತನದಿಂದ ಶೇಕಡಾ 10ರಷ್ಟನ್ನು 2 ವರ್ಷಗಳ ಅವಧಿಯವರೆಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ನಾಗೇಶ ರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-3).

PR-823

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಬಸವರಾಜ ಕುಕ್ಕುಂದ, ನಿವೃತ್ತ ಮುಖ್ಯ ಇಂಜಿನಿಯರ್ ಇವರು ಬೀದರ್ ಲೋಕೋಪಯೋಗಿ ವಿಭಾಗದ ಟೆಂಡರ್ ಮರುಗುತ್ತಿಗೆಯಲ್ಲಿ ಎಸಗಿರುವ ಅಕ್ರಮಗಳ ಬಗ್ಗೆ ಲೋಕಾಯುಕ್ತ ಇಲಾಖಾ ವಿಚಾರಣೆಯಲ್ಲಿ ಇವರ ವಿರುದ್ಧದ ಆರೋಪವು ಸಾಬೀತಾಗಿರುವುದರಿಂದ ದಂಡನೆಯನ್ನು ವಿಧಿಸುವ ಬಗ್ಗೆ

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಲೋಇ 30 ಸೇಇವಿ 2002, ದಿನಾಂಕ: 12/09/2002.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 22 ಎಸ್ಇಎನ್2002, ದಿನಾಂಕ: 23/09/2002
3. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: LOK/INQ/14-A/65/2002-03/ARE-4, ದಿನಾಂಕ: 27/01/2020ರೊಂದಿಗೆ ಸ್ವೀಕೃತವಾಗಿರುವ ತನಿಖಾ ವರದಿ ಹಾಗೂ ಮಾನ್ಯ ಲೋಕಾಯುಕ್ತರ ಶಿಫಾರಸ್ಸು ಸಂಖ್ಯೆ: LOK/INQ/14-A/65/2002-03/ARE-4 Old No.LOK/INQ/14-A/52/02-03 ದಿನಾಂಕ: 24/01/2020

4. ಸರ್ಕಾರದ 2ನೇ ಕಾರಣ ಕೇಳುವ ನೋಟೀಸ್‌ಸಂಖ್ಯೆ: ಸಿಆಸುಇ 22 ಎಸ್‌ಇಎನ್‌2002, ದಿನಾಂಕ: 28/02/2020
5. ಶ್ರೀ ಬಸವರಾಜ ಕುಕ್ಕುಂದ ಇವರ ಲಿಖಿತ ಸಮಜಾಯಿಷಿ ದಿನಾಂಕ: 13/03/2020
6. ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 22 ಎಸ್‌ಇಎನ್‌2002, ದಿನಾಂಕ: 28/02/2020

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಶ್ರೀ ಆನಂದ್ ಎಸ್.ದೇವಪ್ಪ, ಭಾಲ್ಕಿ ಇವರು ಲೋಕಾಯುಕ್ತ ಕಾಯ್ದೆ ಕಲಂ-7ರನ್ವಯ ಸಲ್ಲಿಸಿರುವ ದೂರಿನನ್ವಯ ಲೋಕಾಯುಕ್ತ ಕಛೇರಿಯು ತನಿಖೆ ನಡೆಸಿದ್ದು, ನಬಾರ್ಡ್‌ಸಹಾಯಧನದಡಿ ಬೀದರ್‌ಜಿಲ್ಲೆಯ 11 ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಮೊದಲು ದಿನಾಂಕ: 22/06/2000ರಂದು ಟೆಂಡರ್‌ಕರೆದಿದ್ದು, ಸ್ವೀಕೃತವಾದ ಟೆಂಡರ್‌ಅರ್ಜಿಗಳನ್ನು ತೆರೆದು ಪರಿಶೀಲಿಸದೇ ನಂತರ ಅದೇ ಕಾಮಗಾರಿಗಳಿಗೆ ಮರುಟೆಂಡರ್‌ಕರೆಯಲಾಗಿದ್ದು, ಮರು ಟೆಂಡರ್‌ಕರೆದಿರುವುದರಿಂದ ಸರ್ಕಾರಕ್ಕೆ ರೂ.43,37,050.10ಗಳಷ್ಟು ನಷ್ಟವಾಗಿದ್ದು, ಈ ರೀತಿಯ ಅಕ್ರಮವಾಗಲು ಶ್ರೀ ಬಸವರಾಜ ಕುಕ್ಕುಂದ, ಹಿಂದಿನ ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ವೃತ್ತ, ಗುಲ್ಬರ್ಗಾ ಹಾಗೂ ಶ್ರೀ ಕೆ.ಬಿ.ರಾಜಪುರೋಹಿತ್, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ವಿಭಾಗ, ಬೀದರ್‌ಅಧಿಕಾರಿಗಳು ಜವಾಬ್ದಾರರೆಂದು ತಿಳಿಸಿ, ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಮೊತ್ತ ರೂ.43,37,050.10ಗಳನ್ನು 3 ತಿಂಗಳ ಒಳಗೆ ಆಪಾದಿತರು ಸರ್ಕಾರಕ್ಕೆ ತುಂಬಿ, ತಪ್ಪಿಗಾಗಿ ಸರ್ಕಾರದ ಕ್ಷಮಾದಾನ ಕೋರಿದರೆ ಸರ್ಕಾರವು ಸದರಿಯವರುಗಳಿಗೆ ಕ್ಷಮಾದಾನವನ್ನು ನೀಡಲು; ಒಂದುವೇಳೆ ಅವರುಗಳು ಕ್ಷಮಾದಾನ ಕೋರಲು ವಿಫಲರಾದರೆ ಸದರಿಯವರುಗಳ ವಿರುದ್ಧ ಶಿಸ್ತುಕ್ರಮ, ಕ್ರಿಮಿನಲ್‌ಹಾಗೂ ಸಿವಿಲ್‌ಕ್ರಮಗಳನ್ನು ಕೈಗೊಳ್ಳುವಂತೆ ಮಾನ್ಯ ಲೋಕಾಯುಕ್ತರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ-1984ರ ಕಲಂ12(3) ಅಡಿಯಲ್ಲಿ ಶಿಫಾರಸ್ಸು ಮಾಡಿದ್ದು, ಅದರಂತೆ ಆಪಾದಿತ ಅಧಿಕಾರಿಯವರುಗಳು ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಮೊತ್ತ ರೂ.43,37,050.10/- ಗಳನ್ನು ತುಂಬದೇ ಇರುವುದರಿಂದ ಶ್ರೀ ಕೆ.ಬಿ.ರಾಜಪುರೋಹಿತ್, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ವಿಭಾಗ, ಬೀದರ್‌ಇವರ ಮೇಲಿನ ಆಪಾದನೆಗಳ ಬಗ್ಗೆ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957ರ ನಿಯಮ 11ರಂತೆ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಸದರಿ ನಿಯಮಗಳ ನಿಯಮ-14ಎ ರಂತೆ ಪ್ರಕರಣವನ್ನು ಮಾನ್ಯ ಲೋಕಾಯುಕ್ತರವರಿಗೆ ವಹಿಸಿ ಲೋಕೋಪಯೋಗಿ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ಶ್ರೀ ಬಸವರಾಜ ಕುಕ್ಕುಂದ, ನಿವೃತ್ತ ಮುಖ್ಯ ಇಂಜಿನಿಯರ್‌ಇವರು ಗುಲ್ಬರ್ಗಾ ವಲಯದಲ್ಲಿ ಸೂಪರಿಂಟೆಂಡಿಂಗ್‌ಇಂಜಿನಿಯರ್‌ಆಗಿ ಕಾರ್ಯನಿರ್ವಹಿಸುತ್ತಿದ್ದಾಗ, ನಬಾರ್ಡ್‌ಯೋಜನೆಯಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸುವಲ್ಲಿ ಕೆಲವು ಗುತ್ತಿಗೆದಾರರೊಡನೆ ಷಾಮೀಲಾಗಿ, ಈ ಹಿಂದೆಯೇ ಎಕ್ಸಿಕ್ಯೂಟಿವ್‌ಎಂಜಿನಿಯರ್‌ಕರೆದಿದ್ದ ಟೆಂಡರ್‌ನ್ನು ರದ್ದುಪಡಿಸಿ, ಮರುಟೆಂಡರ್‌ಕರೆಯುವ ಮೂಲಕ ಸರ್ಕಾರಕ್ಕೆ 43,37,050-00/- ರೂಪಾಯಿಗಳನ್ನು ನಷ್ಟ ಉಂಟು ಮಾಡಿರುತ್ತಾರೆ ಎಂಬುದಾಗಿ ಬೀದರ್‌ಜಿಲ್ಲೆಯ ಕೆಲವೊಂದು ಯುವಕರು ಮಾನ್ಯ ಲೋಕಾಯುಕ್ತರಿಗೆ ನೀಡಿದ ದೂರಿನ ಮೇರೆಗೆ ಮಾನ್ಯ ಲೋಕಾಯುಕ್ತರು ತನಿಖೆ ನಡೆಸಿ ಆಪಾದಿತ ಅಧಿಕಾರಿಯ ವಿರುದ್ಧ ಮಾಡಿರುವ ಆರೋಪವು ಮೇಲ್ನೋಟಕ್ಕೆ ಸತ್ಯವಾಗಿ ಕಂಡುಬಂದಿರುವ ಕಾರಣ, ಸದರಿ ಅಧಿಕಾರಿಯ ಕ್ರಮದಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವನ್ನು ವಸೂಲಿ ಮಾಡಲು ಅಧಿಕಾರಿಯ ವಿರುದ್ಧ ಕ್ರಿಮಿನಲ್‌ಮೊಕದ್ದಮೆ; ಸಿವಿಲ್‌ದಾವೆ ಹೂಡುವಂತೆಯೂ, ಆ ಪೂರ್ವದಲ್ಲಿ ಅಧಿಕಾರಿಗೆ ನಷ್ಟ ಹಿಂದಿರುಗಿಸಲು ಒಂದು ಅವಕಾಶ ನೀಡುವಂತೆಯೂ ಕರ್ನಾಟಕ ಲೋಕಾಯುಕ್ತ ಕಾಯ್ದೆ-1984ರ ಕಲಂ-12(3) ವರದಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ಮಾನ್ಯ ಲೋಕಾಯುಕ್ತರ ವರದಿಯಲ್ಲಿನ ಶಿಫಾರಸ್ಸಿನನುಸಾರ ಆಪಾದಿತ ಅಧಿಕಾರಿಯವರುಗಳು ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಮೊತ್ತ ರೂ.43,37,050.10ಗಳನ್ನು ತುಂಬದೇ ಇರುವುದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ 214(2)(ಬಿ)(III)ರನ್ವಯ ಶ್ರೀ ಬಸವರಾಜ ಕುಕ್ಕುಂದ, ನಿವೃತ್ತ ಮುಖ್ಯ ಇಂಜಿನಿಯರ್‌ಅವರ ವಿರುದ್ಧದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ವಿಚಾರಣೆಯು ಸನ್ಮಾನ್ಯ ಲೋಕಾಯುಕ್ತರ ಮೂಲಕ ನಡೆಯಬೇಕೆಂದು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (3)ರ ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದೊಂದಿಗೆ ತನಿಖಾ ವರದಿ ಹಾಗೂ ಮಾನ್ಯ ಲೋಕಾಯುಕ್ತರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ: 24/01/2020ರ ಶಿಫಾರಸ್ಸನ್ನು ಲಗತ್ತಿಸಿ ಕಳುಹಿಸಿರುತ್ತಾರೆ. ಮಾನ್ಯ ಲೋಕಾಯುಕ್ತರು ತಮ್ಮ ಶಿಫಾರಸ್ಸಿನಲ್ಲಿ ಆರೋಪಿತ ಅಧಿಕಾರಿ-1 ಶ್ರೀ ಬಸವರಾಜ ಕುಕ್ಕುಂದ, ನಿವೃತ್ತ ಮುಖ್ಯ ಇಂಜಿನಿಯರ್‌ಹಾಗೂ ಆರೋಪಿತ ಅಧಿಕಾರಿ-2 ದಿವಂಗತ ಅಧಿಕಾರಿ ಕೆ.ಬಿ.ರಾಜಪುರೋಹಿತ್‌ಇವರುಗಳ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ಆರೋಪಗಳು ರುಜುವಾತಾಗಿರುವುದಾಗಿ ತನಿಖಾಕಾರಿಗಳು ತಿಳಿಸಿದ್ದು, ತನಿಖಾಧಿಕಾರಿಗಳ ತನಿಖಾ ವರದಿಯನ್ನು ಒಪ್ಪಿ ಮಾನ್ಯ ಲೋಕಾಯುಕ್ತರು ಈ ಕೆಳಕಂಡಂತೆ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ:

D.G.O.No.1:-

Sri Basavraja Kukunda, Chief Engineer, the then Superintending Engineer, PWD Circle Gulbarga (now retired) may be denied 20% of the monthly pension payable to him permanently. Further the Competent Authority may take steps to recover a sum of Rs.43,37,050.10(Rupees Forty three lakhs thirty seven thousand and fifty and paisa ten only) along with interest at 8% in respect of the loss caused to the State in terms of Rule 214(1)(b)of KCSRs.

D.G.O.No.2:-

(a) Sri K.B. Rajapurohith, the then Executive Engineer, PWD Division, Bidar is dead, the conclusion reached by the Inquiry Officer that the inquiry proceedings is abated against DGO-2 is correct and requires to be accepted.

(b) Since the disciplinary proceedings initiated against the DGO-2 Sri K.B. Rajapurohith, the then Executive Engineer, PWD Division, Bidar has abated, all the retirement benefits payable to him and the family pension to his widow is required to be settled without delay.

ಮೇಲೆ ಓದಲಾದ (4)ರ 2ನೇ ಕಾರಣ ಕೇಳುವ ನೋಟೀಸಿನಲ್ಲಿ ಶ್ರೀ ಬಸವರಾಜ ಕುಕ್ಕುಂದ, ನಿವೃತ್ತ ಮುಖ್ಯ ಇಂಜಿನಿಯರ್ ಇವರಿಗೆ ಈ ಹಿಂದೆ ಗುಲ್ಬರ್ಗಾ ವಲಯದಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾಗ, ನಬಾರ್ಡ್ ಯೋಜನೆಯಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸುವಲ್ಲಿ ಕೆಲವು ಗುತ್ತಿಗೆದಾರರೊಡನೆ ಷಾಮೀಲಾಗಿ ಈ ಹಿಂದೆಯೇ ಎಕ್ಸಿಕ್ಯೂಟಿವ್ ಇಂಜಿನಿಯರ್ ಕರೆದಿದ್ದ ಟೆಂಡರನ್ನು ರದ್ದುಪಡಿಸಿ, ಮರು ಟೆಂಡರ್ ಕರೆಯುವ ಮೂಲಕ ಸರ್ಕಾರಕ್ಕೆ ರೂ.43,37,050/-ರೂಪಾಯಿಗಳಷ್ಟು ನಷ್ಟ ಉಂಟು ಮಾಡಿದ ಆರೋಪ ಕುರಿತಂತೆ ಮಾನ್ಯ

ಲೋಕಾಯುಕ್ತರಿಗೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957ರ ನಿಯಮ-14(ಎ)ರನ್ವಯ ವಹಿಸಲಾಗಿದ್ದ ಇಲಾಖಾ ವಿಚಾರಣೆಯಲ್ಲಿ ಮಾನ್ಯ ಲೋಕಾಯುಕ್ತರು ಎಲ್ಲಾ ಆರೋಪಗಳು ಸಾಬೀತಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆಂದು ಹಾಗೂ ಮಾನ್ಯ ಲೋಕಾಯುಕ್ತರ ವಿಚಾರಣಾ ವರದಿಯನ್ನು ಲಗತ್ತಿಸಿ, ಈ ಸಂಬಂಧ ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ (5)ರ ಶ್ರೀ ಬಸವರಾಜ ಕುಕ್ಕುಂದ ಇವರ ಲಿಖಿತ ಸಮಜಾಯಿಷಿಯಲ್ಲಿ ಸರ್ಕಾರದ 2ನೇ ಕಾರಣ ಕೇಳುವ ನೋಟೀಸಿಗೆ ಸಂಬಂಧಿಸಿದಂತೆ ತಾವು ನಿವೃತ್ತಿಯಾಗಿ 18 ವರ್ಷಗಳ ನಂತರ ತನಿಖಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ. ತಮಗೆ 76 ವರ್ಷ ವಯಸ್ಸಾಗಿದ್ದು, ವಯೋ ಸಹಜ ಕಾಯಿಲೆಗಳಿಂದ ಬಳಲುತ್ತಿದ್ದು, ಪ್ರಸ್ತಾಪಿತ ಮಾನ್ಯ ಲೋಕಾಯುಕ್ತ ರವರ ಶಿಫಾರಸ್ಸಿನಲ್ಲಿ ನಿವೃತ್ತಿ ವೇತನದಲ್ಲಿ ಶೇಕಡ 20ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸುವ ಹಾಗೂ ನಷ್ಟದ ಮೊತ್ತ ರೂ. 43,37,050.10/-ಗಳನ್ನು ವಸೂಲಿ ಮಾಡುವ ಕ್ರಮವು ಸರಿಯಾಗಿರುವುದಿಲ್ಲವೆಂದು ತಿಳಿಸಿ, ತನಿಖಾಧಿಕಾರಿಯವರು ಸಲ್ಲಿಸಿರುವ ವರದಿ ಹಾಗೂ ಮಾನ್ಯ ಲೋಕಾಯುಕ್ತರ ಶಿಫಾರಸ್ಸನ್ನು ತಳ್ಳಿಹಾಕುವಂತೆ ಕೋರಿರುತ್ತಾರೆ.

ಈ ಕುರಿತು ಪ್ರಕರಣದ ಆರೋಪಗಳು, ಮಾನ್ಯ ಲೋಕಾಯುಕ್ತರ ವರದಿ ಹಾಗೂ ಆರೋಪಿ-1 ಅಧಿಕಾರಿಯಾದ ಶ್ರೀ ಬಸವರಾಜ ಕುಕ್ಕುಂದ ಇವರು ಸರ್ಕಾರದ 2ನೇ ಕಾರಣದ ಕೇಳುವ ನೋಟೀಸಿಗೆ ಸಲ್ಲಿಸಿದ್ದ ಲಿಖಿತ ಸಮಜಾಯಿಷಿಯನ್ನು ಕೂಲಂಕಷವಾಗಿ ಪರಿಶೀಲನೆಗೊಳಪಡಿಸಲಾಗಿರುತ್ತದೆ.

CHARGE AGAINST DGO NO.1:-

Sri Basavaraj S. Kukunda, Superintending Engineer, PWD Circle, Gulbarga by your improper and corrupt motive without accepting the report of the Executive Engineer, PWD Division, Bidar, with regard to the receipt of tenders, have given report dated: 19/10/2000 to the Government in favour of the contractors in the matter of recalling the tenders for the eleven road works under Nabard Scheme in Bidar District without opening the tenders already received and you are responsible for re- tendering the works by your manipulative engineering skills and unwarranted recommendation to the Chief Engineer to accept the contractors tenders received for the said works pursuant to subsequent notification dated: 08/11/2000 and thus caused loss of Rs.43,37,050.10 to the Government and thereby failed to act in accordance with the norms of integrity and conduct which out to be followed by the officer of the clause to which you belong and thus committed misconduct u/rule 3(1)(i) to (iii) of KCS (Conduct) Rules, 1966.

CHARGE AGAINST DGO NO.2:-

Sri Raj Purohith, while working as Executive Engineer, PWD, Bidar, in spite of your report dated: 18/10/2000 about receipt of tenders on 30/09/2000 have submitted to the Superintending Engineer a contradictory report in response to the endorsement of District Minister Sri B. Malaka Reddy and you have abused your powers for granting favours having passed the way for making only 4 favourite contractors submit their tenders pursuant to the subsequent tender notification dated: 08/11/2000 by making unwarranted new conditions which prevented earlier tenderers from submitting lowest tenders as before and unwarrantedly recommended 4 tenders for acceptance to Chief Engineer through Superintending Engineer and having included essential terms relating to the time or completion of the works and EMD

unwarrantedly to the detriment of the Government and you along with DGO-1 are responsible for the loss of Rs.43,37,050.10 to the Government and thereby you failed to act in accordance with the norms of integrity and conduct which ought to be followed by the officer of the clause to which you belong and thus committed misconduct u/Rule 3(1)(i) to (iii) of KCS (Conduct) Rules, 1966.

ಆರೋಪಿತ-1 ಅಧಿಕಾರಿಯಾದ ಶ್ರೀ ಬಸವರಾಜ ಕುಕ್ಕುಂದ ಇವರ ಮೇಲಿನ ದೋಷಾರೋಪಣೆ ಕುರಿತಂತೆ ಸರ್ಕಾರದ 2ನೇ ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿದ್ದ ಲಿಖಿತ ಸಮಜಾಯಿಷಿಯಲ್ಲಿ ಲೋಕಾಯುಕ್ತ ಶೀಫಾರಸ್ಸನ್ನು ಅಲ್ಲಗೆಳೆಯುತ್ತಾ ತಾವು ಜುಲೈ 1999 ರಿಂದ ಆಗಸ್ಟ್2001ರ ಅವಧಿಯಲ್ಲಿ ಅಧೀಕ್ಷಕ ಅಭಿಯಂತರರಾಗಿ ಕಾರ್ಯನಿರ್ವಹಿಸಿದ್ದು; ಬೀದರ್ಜಿಲ್ಲೆಯ ನಬಾರ್ಡ್ಯೋಜನೆಯಡಿ 11 ರಸ್ತೆಗಳ ಕಾಮಗಾರಿ ಸಂಬಂಧ ದಿನಾಂಕ: 22/06/2000ರಂದು ಟೆಂಡರ್ಅಧಿಸೂಚನೆ ಹೊರಡಿಸಲಾಗಿದೆಯೆಂದೂ, ಈ ಟೆಂಡರ್ಅಧಿಸೂಚನೆಗೆ ಟೆಂಡರ್ಗಳನ್ನು ಸಲ್ಲಿಸುವ ಸಮಯದಲ್ಲಿ ಟೆಂಡರ್ಸಲ್ಲಿಸುವಲ್ಲಿ ನಿಗದಿಪಡಿಸಿದ ನಿಯಮಗಳನ್ನು ಪಾಲಿಸಿಲ್ಲವೆಂದು ಗುತ್ತಿಗೆದಾರರು ಆಕ್ಷೇಪಣೆಗಳನ್ನು ಸಲ್ಲಿಸಿ, ತದನಂತರ ಈಗಾಗಲೇ ಸ್ವೀಕರಿಸಲಾಗಿರುವ ಟೆಂಡರ್ಗಳನ್ನು ರದ್ದುಪಡಿಸುವಂತೆ ಕೋರಿರುತ್ತಾರೆ. ಅಂದಿನ ಮಾನ್ಯ ಲೋಕೋಪಯೋಗಿ ಸಚಿವರು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರಿಗೆ ಮರು ಟೆಂಡರ್ಸಂಬಂಧ ಕ್ರಮವಹಿಸುವಂತೆ ತಿಳಿಸಿರುತ್ತಾರೆ. ಈ ಕುರಿತು ಅಗತ್ಯ ವರದಿ ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆಯು ಕಾರ್ಯಪಾಲಕ ಅಭಿಯಂತರರು, ಬೀದರ್ರವರಿಗೆ ದಿನಾಂಕ:13/10/2000ರಂದು ತಿಳಿಸಿರುತ್ತಾರೆ. ಈ ಸಂಬಂಧ ಕಾರ್ಯಪಾಲಕ ಅಬಿಯಂತರರು ವರದಿ ಸಲ್ಲಿಸುವಲ್ಲಿ ವಿಳಂಬವಾದ್ದರಿಂದ ದಿನಾಂಕ: 16/10/2000ರಂದು ಬೀದರಿನಲ್ಲಿ ತನಿಖೆ ಕೈಗೊಂಡು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಂದ ಅವಶ್ಯ ಮಾಹಿತಿಯನ್ನು ಪಡೆಯಲಾಗಿದೆ ಎಂಬ ಅಂಶವನ್ನು ತಿಳಿಸಿರುತ್ತಾರೆ.

ಟೆಂಡರ್ಗಳನ್ನು ಸಲ್ಲಿಸಲು ಕೊನೆಯ ದಿನವಾದ ದಿನಾಂಕ: 30/09/2000ದಂದು ಸಂಜೆ 3.45ರ ತನಕ ಯಾವುದೇ ಗುತ್ತಿಗೆದಾರರು ಟೆಂಡರ್ಸಲ್ಲಿಸಲು ಬಂದಿರುವುದಿಲ್ಲವೆಂದೂ, ಆದರೆ, ಸುಮಾರು 3.55ಕ್ಕೆ 12 ಗುತ್ತಿದಾರರು ಅವರ ಬೆಂಗಲಿಗರೊಂದಿಗೆ ಟೆಂಡರ್ಸಲ್ಲಿಸಲು ಬಂದಿದ್ದು, ಆ ಸಮಯದಲ್ಲಿ 5 ನಿಮಿಷಗಳೊಳಗಾಗಿ ಎಲ್ಲಾ ಬುಕ್ಲೆಟ್ಸ್ಗಳನ್ನು ಬಾಕ್ಸ್ಗಳಲ್ಲಿ ಫೈಲ್ಮಾಡಲಾಗಿದೆ. ಕಾಲಾವಕಾಶ ಇಲ್ಲದಿದ್ದರಿಂದ ಟೆಂಡರ್ ಬುಕ್ಲೆಟ್ಸ್ನ ಕವರ್ಗಳನ್ನು ಪರಿಶೀಲಿಸಲಾಗಿರುವುದಿಲ್ಲ ಹಾಗೂ ರಿಜಿಸ್ಟರ್ನಲ್ಲಿ ಸಹಿ ಪಡೆಯಲು ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ದಿನಾಂಕ: 18/10/2000ರಂದು ಅಂದಿನ ಕಾರ್ಯಪಾಲಕ ಅಭಿಯಂತರರು ವರದಿ ಸಲ್ಲಿಸಿ ಟೆಂಡರ್ಸಲ್ಲಿಸುವ ಸಮಯದಲ್ಲಿ ಯಾವುದೇ ದುರುದ್ದೇಶ ಆಗಿರುವುದಿಲ್ಲ. ನಿಯಮಾನುಸಾರವೇ ಟೆಂಡರ್ಗಳನ್ನು ಸಲ್ಲಿಸಲಾಗಿದೆ ಹಾಗೂ ಟೆಂಡರ್ಪಟ್ಟಿಗೆಗಳನ್ನು ನಿಗದಿತ ಸಮಯದೊಳಗೆ ಸೀಲ್ಮಾಡಲಾಗಿದೆಯೆಂದು ವರದಿ ಸಲ್ಲಿಸಿರುತ್ತಾರೆ. ಅದರಂತೆ ಸಹಾಯಕ ಇಂಜಿನಿಯರ್, ತಾಂತ್ರಿಕ ಸಹಾಯಕರು ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್ರವರು ಸಲ್ಲಿಸಿದ್ದ ವರದಿಯ ಮೇಲೆ ಆಪಾದಿತ ಅಧಿಕಾರಿಯ ದಿನಾಂಕ: 19/10/2000ರಂದು ಮುಖ್ಯ ಇಂಜಿನಿಯರ್ರರಿಗೆ ವರದಿ ಸಲ್ಲಿಸಲಾಗಿದೆಯೆಂದು ತಿಳಿಸಿರುತ್ತಾರೆ. ಆದರೆ, ಈ ವರದಿಯನ್ನು ಪರಿಗಣಿಸದೆ ತಮ್ಮ ವಿರುದ್ಧ ತಪ್ಪು ಆರೋಪಗಳನ್ನು ಮಾಡಿದ್ದು, ಇದರಿಂದಾಗಿ ಲೋಕಾಯುಕ್ತ ಸಂಸ್ಥೆಯು ದೂರುದಾರರ ಸುಳ್ಳು ದೂರನ್ನಾಧರಿಸಿ ಆರೋಪ ಪಟ್ಟಿಯನ್ನು ಮಾಡಿರುತ್ತದೆ. ಇದರಿಂದಾಗಿ ತನಿಖಾಧಿಕಾರಿಯವರು ಸಲ್ಲಿಸಿರುವ ವರದಿ ಹಾಗೂ ಮಾನ್ಯ ಲೋಕಾಯುಕ್ತರು ಮಾಡಿರುವ ಶಿಫಾರಸ್ಸಿನಲ್ಲಿ ಯಾವುದೇ ಪರಿಗಣಿಸುವ ಅಂಶಗಳಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮುಂದುವರೆದು, ವಿಚಾರಣಾಧಿಕಾರಿಯವರು ದಿನಾಂಕ: 27/12/2019ರಂದು ಸಲ್ಲಿಸಿರುವ ವಿಚಾರಣಾ ವರದಿಯ ಕಂಡಿಕೆ-70ರಲ್ಲಿ ಆಪಾದಿತ 1 (ಆರೋಪಿತ ಅದಿಕಾರಿ) ಹಾಗೂ ಆಪಾದಿತ 2 (ಶ್ರೀ ಕೆ.ಬಿ. ರಾಜಪುರೋಹಿತ್, ಅಂದಿನ ಕಾರ್ಯಪಾಲಕ ಅಭಿಯಂತರರು, ಬೀದರ್ಲೋಕೋಪಯೋಗಿ ಇಲಾಖೆ ವಿಭಾಗ- ಪ್ರಸ್ತುತ ನಿಧನ ಹೊಂದಿರುತ್ತಾರೆ) ಇವರುಗಳು ಇಬ್ಬರು

ಸಮವಾಗಿ ಸದರಿ ನಷ್ಟ ಉಂಟಾಗಲು ಕಾರಣಕರ್ತರಾಗಿರುತ್ತಾರೆಂದು ತಿಳಿಸಲಾಗಿದೆ. ಆದರೆ, ತಮ್ಮ ನಿವೃತ್ತಿ ಸೌಲಭ್ಯಗಳಿಂದ ರೂ.21,68,528/- ಗಳನ್ನು ಮರುಪಾವತಿಸಲು ತಿಳಿಸಲಾಗಿದೆ. ಆದರೆ, ತನಿಖಾಧಿಕಾರಿಯವರ ಈ ವರದಿಯನ್ನು ಗಮನಿಸದೆ ಮಾನ್ಯ ಲೋಕಾಯುಕ್ತರು ಸಂಪೂರ್ಣ ನಷ್ಟದ ಮೊತ್ತ ರೂ. 43,37,050.10/-ಗಳನ್ನು ತಮ್ಮೊಬ್ಬರಿಂದಲೇ ವಸೂಲಿ ಮಾಡಲು ತಿಳಿಸಿದ್ದು, ಇದು ಸರಿಯಾದ ಕ್ರಮವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ತಾವು ನಿವೃತ್ತಿಯಾಗಿ 18 ವರ್ಷಗಳ ನಂತರ ತನಿಖಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ. ಈಗಾಗಲೇ ತಮಗೆ 76 ವರ್ಷ ವಯಸ್ಸಾಗಿದ್ದು, ವಯೋ ಸಹಜ ಕಾಯಿಲೆಗಳಿಂದ ಬಳಲುತ್ತಿದ್ದು; ನಿವೃತ್ತಿ ವೇತನದಲ್ಲಿ ಶೇಕಡ 20ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸುವ ಹಾಗೂ ನಷ್ಟದ ಮೊತ್ತವಾದ ರೂ.43,37,050.10/-ಗಳನ್ನು ವಸೂಲಿ ಮಾಡುವ ಕ್ರಮವು ಸರಿಯಾಗಿರುವುದಿಲ್ಲವೆಂದು ತಿಳಿಸಿ ತನಿಖಾಧಿಕಾರಿಯವರು ಸಲ್ಲಿಸಿರುವ ವರದಿ ಹಾಗೂ ಮಾನ್ಯ ಲೋಕಾಯುಕ್ತರ ಶಿಫಾರಸ್ಸನ್ನು ತಳ್ಳಿಹಾಕುವಂತೆ ಕೋರಿರುತ್ತಾರೆ. ಆಪಾದಿತ ಅಧಿಕಾರಿಯವರು ಸಲ್ಲಿಸಿರುವ ಸಮಜಾಯಿಷಿಯಲ್ಲಿನ ಕೆಲವು ಅಂಶಗಳನ್ನು ಯಥಾವತ್ತಾಗಿ ಈ ಕೆಳಗಿನಂತೆ ತರಲಾಗಿದೆ:-

" It is submitted that on the written submission made by one Vijay Kumar Chature, the then Assistant Engineer, PWD Department reveals that, till 3.45 PM on 30.09.2000(Date for submission of tenders) No Contractors came for submitting any tender, but at 3.55 PM at a time 12 Contractors and their supporters came for submitting the tenders. At that time within 5 minutes all the Booklets were filed in the Box and in view of the shortage of time and due to commotion, he could not able to verify the covers containing tenders booklets. And also could not able to take the signature in the register. Further, one Murthy J.M. was working as a Technical Assistant in PWD Department submitted his written submission contending that on 30.09.2000 evening by 4.00 PM all 12 contractors came after 4.00 PM were not allowed to submit their tenders.

In the meanwhile on 18.10.2000 the then Executive Engineer sent a report saying that no malafide was happened while submitting the tenders and further, he has submitted that, as per the rules only the tenders was submitted and the tender box was sealed after the completion of the specified time. Based on the report of the Assistant Engineer, Technical Assistant and in consideration of the report submitted by the Executive Engineer, I prepared a separate report and submitted to the Chief Engineer on 19/10/2000(Ex-D1) considering the written submissions made by the Assistant Engineer, Technical Assistant and also report submitted by the Executive Engineer. Further, it is to bring to notice of this Hon'ble Authority that, I considered in details the report of the Executive Engineer while submitting my report to the Chief Engineer in my report dated: 19/10/2000. But, without considering the said report in details a false allegation made against me and which leads to illegally frame the charges by the Lokayuktha upon a false complaint made by the Complainant.

It is submitted that, in the Enquiry Report dated 27.12.2019 in Para 70, states the DGO Nos.1 and 2 are equally responsible for said loss. It was proposed to reimburse for a sum of Rs.21,62,528/- from my pension benefits. But surprisingly, the Lokayuktha without looking into observation made by the Enquiry Officer in his report in Para 70, proposed to recover the entire sum of Rs.43,37,050.10 from me only, excluding the role played by the DGO-2.

I have not at all caused any loss to the Government as alleged by the Enquiry Officer and also as well as the recommendation made by the Lokayuktha. The Enquiry Report was submitted by the Enquiry Officer after lapse of 18 years from my retirement. Though there is no truth in the Enquiry as well as in the complaint the alleged report came to be issued against me and the same was approved by the Lokayuktha under the recommendation.

Further, it is submitted that I am suffering from several diseases since I am aged 76 years and I am suffering allergic ailments and also diabetic and other age related ailments. The conduct of proposing for deduction of 20% of my pension and also recover of sum of Rs.43,37,050.10 is highly illegal and contrary to the documents on record. Under the said circumstances, it is just and necessary to quash the report submitted by the Enquiry Officer.

ಈ ಬಗ್ಗೆ ಪರಿಶೀಲಿಸಲಾಗಿ ಆರೋಪಿತ ಅಧಿಕಾರಿ-1 ಆದ ಶ್ರೀ ಬಸವರಾಜ ಕುಕ್ಕುಂದ ಇವರು ಮೇಲೆ ಸಲ್ಲಿಸಿರುವಂತಹ ಲಿಖಿತ ಸಮಜಾಯಿಷಿಯನ್ನು ವಿಶ್ಲೇಷಿಸಿದಾಗ ಈ ಅಂಶಗಳನ್ನು ಈಗಾಗಲೇ ಲೋಕಾಯುಕ್ತ ಸಂಸ್ಥೆಯು ವಿಚಾರಣೆಯ ಸಮಯದಲ್ಲಿ ಸಮಗ್ರವಾಗಿ ಪರಿಶೀಲಿಸಿ, ತಳ್ಳಿಹಾಕಿರುವುದು ಸ್ಪಷ್ಟವಾಗಿರುತ್ತದೆ.

ಮುಂದುವರೆದು, ಮಾನ್ಯ ಲೋಕಾಯುಕ್ತರ ವರದಿಯಲ್ಲಿ ಆರೋಪಿತರ ವಿರುದ್ಧದ ಆಪಾದನೆಗಳು ರುಜುವಾತಾಗಿರುತ್ತದೆಂದು ಹಾಗೂ ಆರೋಪಿತ ಅಧಿಕಾರಿಯವರು ಮರು ಟೆಂಡರ್‌ನ್ನು ಕರೆಯಲು ಶಿಫಾರಸ್ಸು ಮಾಡಿರುವ ಸಂಬಂಧ ಯಾವುದೇ ಸಕಾರಣಗಳಿರುವುದಿಲ್ಲ ಎಂಬ ಮಾನ್ಯ ಲೋಕಾಯುಕ್ತ ರವರ ವರದಿಯು ಒಪ್ಪತಕ್ಕದ್ದಾಗಿರುತ್ತದೆ. ಅಲ್ಲದೇ, ಆರೋಪಿತ ಅಧಿಕಾರಿಯವರು ಪ್ರಕರಣದಲ್ಲಿನ ಇನ್ನೊಬ್ಬ ಆಪಾದಿತ ಅಧಿಕಾರಿ-2 ಅಂದರೆ ಅಂದಿನ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ, ಬೀದರ್, ಇವರು ನೀಡದ್ದ ವರದಿಯನ್ನು ಒಪ್ಪದೇ, ಆರೋಪಿತ ಅಧಿಕಾರಿಯವರು ಮುಖ್ಯ ಅಭಿಯಂತರರಿಗೆ ಅನಗತ್ಯ ಶಿಫಾರಸ್ಸನ್ನು ಮಾಡಿರುತ್ತಾರೆ ಹಾಗೂ ಆರೋಪಿತ ಅಧಿಕಾರಿ-2 ಇವರು ನೀಡಿದ್ದ ವರದಿಯನ್ನು ಒಪ್ಪದೇ ಗುತ್ತಿಗೆದಾರರಿಗೆ ಸಹಾಯ ಮಾಡುವ ದೃಷ್ಟಿಯಿಂದ ಮೊದಲ ಟೆಂಡರ್‌ಅಧಿಸೂಚನೆಯ ಪ್ರಕಾರ ಡಿಎಸ್‌ಆರ್‌ದರಕ್ಕಿಂತ ಹೆಚ್ಚಿನ ದರ ಉಲ್ಲೇಖಿಸಿರುವ ಗುತ್ತಿಗೆದಾರರಿಗೆ ಸಹಾಯ ಮಾಡಿ ಸರ್ಕಾರಕ್ಕೆ ರೂ.43,37,050.10/-ಗಳಷ್ಟು ನಷ್ಟ ಉಂಟಾಗಲು ಕಾರಣರಾಗಿರುತ್ತಾರೆ ಎಂಬ ಮಾನ್ಯ ಲೋಕಾಯುಕ್ತ ಶಿಫಾರಸ್ಸಿನಲ್ಲಿರುವ ಅಂಶಗಳು ಸ್ಪಷ್ಟವಾಗಿ ಪರಿಗಣಿಸತಕ್ಕದ್ದಾಗಿರುತ್ತವೆ. ಆದ್ದರಿಂದ ಲೋಕಾಯುಕ್ತ ವರದಿಯಲ್ಲಿ ಆರೋಪಿತರ ಬೇಜಾವಾಬ್ದಾರಿಯಿಂದ ಸರ್ಕಾರಕ್ಕೆ ರೂ.43,37,050.10ಗಳಷ್ಟು ಆರ್ಥಿಕ ನಷ್ಟ ಉಂಟಾಗಿರುತ್ತದೆಂದು ತಿಳಿಸಿರುವುದು ಒಪ್ಪತಕ್ಕದ್ದಾಗಿರುತ್ತದೆ. ಈ ಕುರಿತಂತೆ ಮಾನ್ಯ ಲೋಕಾಯುಕ್ತರ ಶಿಫಾರಸ್ಸಿನಲ್ಲಿರುವ ಕೆಲವು ಅಂಶಗಳನ್ನು ಯಥಾವತ್ತಾಗಿ ಈ ಕೆಳಗಿನಂತೆ ತರಲಾಗಿದೆ:-

" The facts and circumstances of this case stated above clearly supports the case of the Disciplinary Authority to the effect that the DGO No:1 has given unwarranted recommendation to the Chief Engineer as per Ex.D1 on the vague allegations made in Ex.P27/Ex.P17(a) without accepting the report of the DGO No:2 and the reports given by the concerned officials who were working in PWD Bidar with an intension to help the contractors who had quoted more than DSR rate as per the first tender notification due to which the Government sustained loss of Rs.43,37,050.10/-. The facts and circumstances of this case further disclose that apart from getting the tender filed in pursuance of the first notification cancelled in view of the report of DGO No:1 marked as per Ex.D1 the above said contractors also avoided sri Madivallap .G.Managalagi, and some other contractors from filing their tenders in pursuance of the second tender notification by getting new conditions imposed in the second tender notification in collusion with the DGO No:2 and as stated above in view of the works allotted as per the tenders filed in pursuance of the second tender notification there was loss of Rs.43,37,050.10/- to the Government.

The loss caused to the State exchequer as noticed by me is in a sum of Rs.43,37,050.10/-. If the enquiry was to be proceeded against DGO-2, both DGO s were liable for reimbursement of the loss to the State jointly and severally in which event, it was open to the State to recover the same either from the DGO-1 or DGO-2. Since the DGO-2 has already expired, I am of the view DGO-1 must be made to reimburse the loss of Rs.43,37,050.10/- , caused to the State with interest of 8 % from the date of payment made to the contractor till the amount is recovered."

ಆದ್ದರಿಂದ, ಆಪಾದಿತ ಅಧಿಕಾರಿಗಳ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯದಿಂದ ಸರ್ಕಾರಕ್ಕೆ ರೂ. 43,37,050.10 ಗಳಷ್ಟು ನಷ್ಟ ಉಂಟು ಮಾಡಿರುತ್ತಾರೆಂಬುದು ಲೋಕಾಯುಕ್ತರ ವರದಿಯಿಂದ ಸ್ಪಷ್ಟವಾಗಿ ದೃಢಪಟ್ಟಿರುತ್ತದೆ. ಆರೋಪಿತ -1 ಅಧಿಕಾರಿಯಾದ ಶ್ರೀ ಬಸವರಾಜ ಕುಕ್ಕುಂದ ಇವರು 2ನೇ ಕಾರಣ ಕೇಳುವ ನೋಟೀಸಿಗೆ ಸರ್ಕಾರಕ್ಕೆ ಸಲ್ಲಿಸಿರುವ ಸಮಜಾಯಿಷಿಯನ್ನು ಒಪ್ಪಲು

ಬರುವುದಿಲ್ಲ. ಆದುದರಿಂದ ಮಾನ್ಯ ಲೋಕಾಯುಕ್ತರ ವರದಿಯಲ್ಲಿನ ಆರೋಪಿತ-1 ಅಧಿಕಾರಿಯಾದ ಶ್ರೀ ಬಸವರಾಜು ಕುಕ್ಕುಂದ ಇವರಿಗೆ ಸಂಬಂಧಿಸಿದಂತೆ ಮಾನ್ಯ ಲೋಕಾಯುಕ್ತರು ಮಾಡಿರುವ ಶಿಫಾರಸ್ಸಿನಲ್ಲಿನ ದಂಡನೆಗಳನ್ನು ಜಾರಿಗೊಳಿಸಲು ಈ ಅಧಿಕಾರಿಯ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ತೀರ್ಮಾನಿಸಿರುತ್ತದೆ.

ಮುಂದುವರೆದು, ಮೇಲೆ ಓದಲಾದ (6)ರ ಅನಧಿಕೃತ ಟಿಪ್ಪಣಿಯಲ್ಲಿ ಮಾನ್ಯ ಲೋಕಾಯುಕ್ತರು ದಿನಾಂಕ: 24/01/2021ರಂದು ಸಲ್ಲಿಸಿರುವ ವರದಿಯಲ್ಲಿ ನಿರ್ದೇಶಿಸಿರುವಂತೆ ಶ್ರೀ ಕೆ.ಬಿ.ರಾಜಪುರೋಹಿತ್, ನಿವೃತ್ತ ಕಾರ್ಯಪಾಲಕ ಇಂಜಿನಿಯರ್ ಇವರು ಮರಣ ಹೊಂದಿರುವುದರಿಂದ ಇವರ ವಿರುದ್ಧದ ವಿಚಾರಣೆಯನ್ನು ಕೈಬಿಡಲಾಗಿದೆ(abated) ಎಂದು ತಿಳಿಸುತ್ತಾ ಇವರ ನಿವೃತ್ತಿ ಸೌಲಭ್ಯಗಳನ್ನು ಹಾಗೂ ಕುಟುಂಬ ವೇತನವನ್ನು ಇವರ ಪತ್ನಿಗೆ ವಿಳಂಬವಿಲ್ಲದಂತೆ ಮಂಜೂರು ಮಾಡುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಬಸವರಾಜ ಕುಕ್ಕುಂದ, ನಿವೃತ್ತ ಮುಖ್ಯ ಇಂಜಿನಿಯರ್ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಇವರಿಗೆ ಸಂಬಂಧಿಸಿದಂತೆ ಮಾನ್ಯ ಲೋಕಾಯುಕ್ತರು ಮಾಡಿರುವ ಶಿಫಾರಸ್ಸಿನಲ್ಲಿನ ದಂಡನೆಯನ್ನು ಜಾರಿಗೊಳಿಸಲು ಸಕ್ಷಮ ಪ್ರಾಧಿಕಾರವಾಧ ಸರ್ಕಾರವು ತೀರ್ಮಾನಿಸಿದ್ದು, ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 22 ಎಸ್ಇಎನ್2002

ಬೆಂಗಳೂರು, ದಿನಾಂಕ: 23/04/2021.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಬಸವರಾಜ ಕುಕ್ಕುಂದ, ನಿವೃತ್ತ ಮುಖ್ಯ ಇಂಜಿನಿಯರ್ಇವರು ಈ ಹಿಂದೆ ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ವೃತ್ತ, ಗುಲ್ಬರ್ಗಾ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನಬಾರ್ಡ್ಸಹಾಯಧನದಡಿ ಬೀದರ್ಜಿಲ್ಲೆಯ 11 ರಸ್ತೆ ಅಭಿವೃದ್ಧಿ ಕಾಮಗಾರಿಗಳ ಮರು ಟೆಂಡರ್ಕರೆದಿರುವುದರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟದ ಸಂಬಂಧ ಆರೋಪಗಳು ಲೋಕಾಯುಕ್ತ ವಿಚಾರಣೆಯಂತೆ ರುಜುವಾತಾಗಿರುವುದರಿಂದ ಸಕ್ಷಮ ಪ್ರಾದಿಕಾರವಾದ ಸರ್ಕಾರವು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ-214(1)(ಎ)ರನ್ವಯ ಅವರ ನಿವೃತ್ತಿ ವೇತನದಲ್ಲಿ ಶೇಕಡ 20ರಷ್ಟನ್ನು ಶಾಶ್ವತವಾಗಿ ತಡೆಹಿಯುವ ದಂಡನೆಯನ್ನು ವಿಧಿಸಲು ಹಾಗೂ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ-214(1)(ಬಿ) ಪ್ರಕಾರ ನಷ್ಟದ ಮೊತ್ತವಾದ ರೂ.43,37,050.10/-ಗಳನ್ನು ಶೇಕಡ 8ರ ಬಡ್ಡಿಯೊಂದಿಗೆ ವಸೂಲಿ ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಕೆ. ಶಾಂತರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-3).

PR-824

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಪಿ.ವಿಶ್ವನಾಥ್, ಸಹಾಯಕ ಇಂಜಿನಿಯರಾಗಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ, ಸಿದ್ದಾಪುರ, ಉತ್ತರ ಕನ್ನಡ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿನ ಆರೋಪಗಳಿಗಾಗಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಇಮುವಿ 2014, ದಿನಾಂಕ: 21/08/2018ರಲ್ಲಿ ವಿಧಿಸಲಾಗಿದ್ದ ದಂಡನೆ ಆದೇಶವನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಳಗಾವಿ ಪೀಠ ಇಲ್ಲಿನ ಅರ್ಜಿ ಸಂಖ್ಯೆ: 7405/2018 ದಿನಾಂಕ: 08/03/2021ರ ಆದೇಶದ ಹಿನ್ನೆಲೆಯಲ್ಲಿ ಪುನರ್ ಪರಿಶೀಲಿಸುವ ಬಗ್ಗೆ

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಇಮುವಿ 2014, ದಿನಾಂಕ: 21/08/2018

2. ಮಾನ್ಯ ಕೆ.ಎ.ಟಿ. ಅರ್ಜಿ ಸಂಖ್ಯೆ: 7405/2018ರಲ್ಲಿ ನ್ಯಾಯಮಂಡಳಿಯು ದಿನಾಂಕ: 08/03/2021ರಂದು ನೀಡಿರುವ ಆದೇಶ

******

ಪ್ರಸ್ತಾವನೆ:-

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಶ್ರೀ ಪಿ.ವಿಶ್ವನಾಥ್ ಇವರು ಈ ಹಿಂದೆ ಸಹಾಯಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ, ಸಿದ್ಧಾಪುರ, ಉತ್ತರ ಕನ್ನಡ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 2006-07ರ ಅವಧಿಯಲ್ಲಿ ಕೆಲವು ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಬಹಳಷ್ಟು ಕೆಲಸಗಳನ್ನು ಟೆಂಡರ್ ಕರೆಯದೇ ತುಂಡು ಗುತ್ತಿಗೆ ಆಧಾರದ ಮೇಲೆ ಕಾಮಗಾರಿಗಳನ್ನು ತೆಗೆದುಕೊಂಡು ಕಾಮಗಾರಿಗಳನ್ನು ನಿರ್ವಹಿಸದೇ ಸರ್ಕಾರದ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ ಎಂಬುದಾಗಿ ಹಾಗೂ ಸಿದ್ಧಾಪುರ ತಾಲ್ಲೂಕಿನ ಜೆ.ಎಂ.ಎಫ್.ಸಿ. ನ್ಯಾಯಾಲಯದ ಆವರಣದಲ್ಲಿ ಸೈಕಲ್ ಸ್ಟಾಂಡ್ ನಿರ್ಮಿಸಲು ನಿಗದಿಪಡಿಸಿದ ಹಣವನ್ನು ಕಾಮಗಾರಿ ಮಾಡದೇ ಬಿಲ್ ಪಾವತಿ ಮಾಡಿದ್ದು, ತದನಂತರ ಮೂರು ವರ್ಷಗಳ ಬಳಿಕ ಕಾಮಗಾರಿ ಪೂರ್ಣಗೊಳಿಸಿರುತ್ತಾರೆ ಎಂಬುದಾಗಿ ಹಾಗೂ ಜೋಗ್‌ಫಾಲ್ಸ್‌ನಲ್ಲಿ ಹಲವಾರು ಕಾಮಗಾರಿಗಳನ್ನು ಕಳಪೆಯಾಗಿ ನಿರ್ವಹಿಸಲಾಗಿದೆ ಎಂಬ ಆರೋಪಗಳಿಗೆ ಶ್ರೀ ಪಿ. ವಿಶ್ವನಾಥ್ ಹಾಗೂ ಇತರ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಸಂಸ್ಥೆಯು ಇಲಾಖಾ ವಿಚಾರಣೆಯಲ್ಲಿ ನಡೆಸಿ ಅಧಿಕಾರಿಯವರ ವಿರುದ್ಧದ ಆರೋಪ ಸಾಬೀತಾದ ಕಾರಣ ಶ್ರೀ ವಿಶ್ವನಾಥ್, ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಇವರಿಗೆ ಸಂಚಿತ ಪರಿಣಾಮ ರಹಿತವಾಗಿ 2 ವಾರ್ಷಿಕ ವೇತನ ಬಡ್ತಿಗಳನ್ನು ಮೂರು ವರ್ಷಗಳವರೆಗೆ ತಡೆಹಿಡಿಯುವಂತೆ ಆದೇಶಿಸಲಾಗಿರುತ್ತದೆ.

ಸರ್ಕಾರದ ಆದೇಶದ ವಿರುದ್ಧ ಅಧಿಕಾರಿಯವರು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಳಗಾವಿ ಇಲ್ಲಿ ದಾಖಲಿಸಿದ್ದ ಅರ್ಜಿ ಸಂಖ್ಯೆ: 7405/2018ರಲ್ಲಿ ಮಾನ್ಯ ನ್ಯಾಯಮಂಡಳಿಯು ದಿನಾಂಕ: 08/03/2021ರಂದು ಮೇಲೆ(2)ರಲ್ಲಿ ಓದಲಾದ ಅಂತಿಮ ಆದೇಶವನ್ನು ಹೊರಡಿಸಿದ್ದು ಸದರಿ ಆದೇಶದ ಉದ್ಧೃತ ಭಾಗ ಕೆಳಕಂಡಂತಿರುತ್ತದೆ:-

> "I) The application is allowed and the order bearing No. ಸಿಆಸುಇ 01 ಇಮುವಿ 2014, dated: 21.08.2018(Annexure-A10) passed by 1st respondent is hereby qushed, In so far as applicant is concerned.

II) Matter is remitted to the 1st respondent for consideration of reply to the second show cause notice submitted by the applicant in accordance with law and as per observations made above"

ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ: 7405/2018ರಲ್ಲಿ ದಿನಾಂಕ: 08/03/2021ರಂದು ನೀಡಿರುವ ತೀರ್ಪಿನನ್ವಯ ಶ್ರೀ ಪಿ.ವಿಶ್ವನಾಥ್, ಸಹಾಯಕ ಇಂಜಿನಿಯರ್ ಇವರು ಸರ್ಕಾರದ 2ನೇ ಕಾರಣ ಕೇಳುವ ನೋಟೀಸ್‌ಗೆ ದಿನಾಂಕ: 18/11/2017ರಂದು ಸರ್ಕಾರಕ್ಕೆ ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಕೆಳಕಂಡಂತೆ ತರಲಾಗಿದೆ:

ì ಅವರು ಸಹಾಯಕ ಇಂಜಿನಿಯರಾಗಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ, ಸಿದ್ದಾಪುರ, ಉತ್ತರ ಕನ್ನಡ ಜಿಲ್ಲೆಯಲ್ಲಿ 2003 ರಿಂದ 2008ರವೆರಗೆ ಸೇವೆ ಸಲ್ಲಿಸಿ, ಪ್ರಸ್ತುತ ಹುಬ್ಬಳ್ಳಿ - ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿಯಲ್ಲಿ ಸೇವೆ ಸಲ್ಲಿಸಿದ್ದು, ಸದರಿ 2ನೇ ಕಾರಣ ಕೇಳುವ ನೋಟೀಸಿನ ಜೊತೆ ಲೋಕಾಯುಕ್ತ ಶಿಫಾರಸ್ಸು ಹಾಗೂ ತನಿಖಾಧಿಕಾರಿಗಳ ವರದಿಯನ್ನು ಕಳುಹಿಸಲಾಗಿದೆ. ಸದರಿ ಶಿಫಾರಸ್ಸಿನಲ್ಲಿ ಮಾನ್ಯ ಲೋಕಾಯುಕ್ತರು ತಮಗೆ ಎರಡು ವಾರ್ಷಿಕ ಮುಂಬಡ್ತಿಗಳನ್ನು without cumulative effect ತಡೆಹಿಡಿಯಲು ಶಿಫಾರಸ್ಸು ಮಾಡಿದ್ದಾರೆಂದು ತಿಳಿಸಿರುತ್ತಾರೆ.

ಈ ಪ್ರಕರಣದ ಬಗ್ಗೆ ಲೋಕಾಯುಕ್ತ ಕಚೇರಿಯಲ್ಲಿ ತನಿಖೆ ನಡೆಯುತ್ತಿರುವಾಗ ತಮ್ಮ ಹೇಳಿಕೆಯನ್ನು ಲಿಖಿತ ರೂಪದಲ್ಲಿ ಹಾಗೂ ಮೌಖಿಕ ರೂಪದಲ್ಲಿ ತಿಳಿಸಿದ್ದರೂ ಕೂಡ ತನಿಖಾಧಿಕಾರಿಗಳ ಶಿಫಾರಸ್ಸಿನಂತೆ ಗುತ್ತಿಗೆದಾರರಿಂದ ರೂ.149968-00ಗಳನ್ನು ಅವರ ಬಿಲ್ಲಿನಲ್ಲಿ ಕಡಿತಗೊಳಿಸಿ ದಿನಾಂಕ: 23.06.2011 ರಂದು ಸರ್ಕಾರದ ಖಜಾನೆಗೆ ಜಮೆ ಮಾಡಿರುತ್ತಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಶ್ರೀ ಗುರುಮೂರ್ತಿ ನಾಯಕ, ವಕೀಲರು, ಸಿದ್ದಾಪುರ ಇವರು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನಲ್ಲಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಕೈಗೆತ್ತಿಕೊಳ್ಳಲಾದ ವಿವಿಧ ಕಾಮಗಾರಿಗಳ ಬಗ್ಗೆ ಲೋಕಾಯುಕ್ತಕ್ಕೆ ದೂರು ಸಲ್ಲಿಸಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತ ಕಚೇರಿಯಿಂದ ತಮಗೆ ನೋಟೀಸನ್ನು 2011ರಲ್ಲಿ ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅಧಿಕಾರಿಯವರು ದಿನಾಂಕ: 10.08.2011ರಂದು ಹೇಳಿಕೆ ಸಲ್ಲಿಸಿ, ಈ ಪ್ರಕರಣದಲ್ಲಿ ತಾವು ಯಾವುದೇ ಕರ್ತವ್ಯ ಲೋಪ ಎಸಗಿಲ್ಲವೆಂದು ಸರ್ಕಾರದ ಬೊಕ್ಕಸಕ್ಕೆ ಯಾವುದೇ ನಷ್ಟ ಉಂಟುಮಾಡಿಲ್ಲವೆಂದು ತಿಳಿಸಿರುತ್ತಾರೆ. ಈ ಹೇಳಿಕೆಯನ್ನು ಪರಿಗಣಿಸದೇ ಲೋಕಾಯುಕ್ತ ತಾಂತ್ರಿಕ ಶಾಖೆಯವರು ತನಿಖೆಗೆ ಆದೇಶಿಸಿದ್ದರ ಹಿನ್ನೆಲೆಯಲ್ಲಿ ತನಿಖಾಧಿಕಾರಿಗಳು ಹಾಗೂ ಅಂದಿನ ಕಾರ್ಯಪಾಲಕ ಇಂಜಿನಿಯರ್ ಆದ ಶ್ರೀ ಕೆ.ಎಸ್.ನಾಗರಾಜ(ನಿವೃತ್ತ) ಇವರು ದಿನಾಂಕ: 28.10.2010ರಂದು(ಎರಡು ದಿನಗಳವರೆಗೆ) ಸಿದ್ದಾಪುರಕ್ಕೆ ಭೇಟಿ ನೀಡಿ ಕಾಮಗಾರಿಗಳ ಸ್ಥಳ ಪರಿಶೀಲನೆ ಮಾಡಿರುತ್ತಾರೆ.

ಈ ಪರಿವೀಕ್ಷಣೆ ಕಾಲಕ್ಕೆ ಕಾಮಗಾರಿಗಳಿಂದ ಹೆಚ್ಚುವರಿಯಾಗಿ ಗುತ್ತಿಗೆದಾರರಿಗೆ ನೀಡಿರುವ ರೂ.149968-00ಗಳನ್ನು ಇವರ ಬಿಲ್ಲಿನಿಂದ ವಸೂಲು ಮಾಡಲು ಮೌಖಿಕವಾಗಿ ತಿಳಿಸಿದ್ದರ ಹಿನ್ನೆಲೆಯಲ್ಲಿ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಸಿರಸಿ ಇವರು ಸದರಿ ಮೊತ್ತವನ್ನು ಕಡಿತಗೊಳಿಸಿ, ಸರ್ಕಾರಿ ಖಜಾನೆಗೆ ಜಮಾ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ.

ಅವರು ಸಹಾಯಕ ಇಂಜಿನಿಯರಾಗಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ, ಸಿದ್ದಾಪುರ ಉತ್ತರ ಕನ್ನಡ ಜಿಲ್ಲೆಯಲ್ಲಿ 2003 ರಿಂದ 2008ರವರೆಗೆ ಸೇವೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಈ ಸಮಯದಲ್ಲಿ 2006-07ನೇ ಸಾಲಿನ ಯೋಜನೇತರ ಕಾಮಗಾರಿಗಳಲ್ಲಿ ಸಿದ್ದಾಪುರ ಜೆ.ಎಂ.ಎಫ್.ಸಿ. ನ್ಯಾಯಾಲಯ ಆವರಣದಲ್ಲಿ ವಾಹನ ನಿಲ್ದಾಣ ನಿರ್ಮಾಣ ಕಾಮಗಾರಿಯನ್ನು ತಮ್ಮ ಮೇಲಾಧಿಕಾರಿಗಳಾದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್, ಅಧೀಕ್ಷಕ ಇಂಜಿನಿಯರ್, ಮುಖ್ಯ ಇಂಜಿನಿಯರ್ ಇವರುಗಳ ಮಾರ್ಗದರ್ಶನದಲ್ಲಿ ನಿರ್ವಹಿಸಲಾಗಿದೆ. ಈ ಕಾಮಗಾರಿಗಳ ನಿರ್ವಹಣೆಯಲ್ಲಿ ತಾವು ಯಾವುದೇ ರೀತಿಯ ಕರ್ತವ್ಯ ಲೋಪ ಎಸಗಿರುವುದಿಲ್ಲ. ತಾನು ಒಬ್ಬ ಜವಾಬ್ದಾರಿಯುತ ಸರ್ಕಾರಿ ನೌಕರನಾಗಿ ತಮ್ಮ ಕರ್ತವ್ಯವನ್ನು ಪಿ.ಡಬ್ಲ್ಯೂಡಿ ಇಲಾಖೆಯ ಎ ಮತ್ತು ಡಿ ಕೋಡ್ ನಿಯಮ, ತುಂಡು ಗುತ್ತಿಗೆ ನಿಯಮದಂತೆ ನಿರ್ವಹಿಸಿರುತ್ತೇನೆಂದು ತಿಳಿಸಿರುತ್ತಾರೆ. ಇದಲ್ಲದೇ ತನಿಖಾಧಿಕಾರಿಗಳು ತಮ್ಮ ವಿಚಾರಣೆ ಸಮಯದಲ್ಲಿ ಗುತ್ತಿಗೆದಾರರ ಬಿಲ್ಲಿನಿಂದ ರೂ.149968-00ಗಳನ್ನು ಕಡಿತಗೊಳಿಸಲು ಶಿಫಾರಸ್ಸು ಮಾಡಿದಂತೆ ಈಗಾಗಲೇ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಸಿರಸಿ ಇವರು ಸದರಿ ಮೊತ್ತವನ್ನು ಕಡಿತಗೊಳಿಸಿ, ಸರ್ಕಾರಿ ಖಜಾನೆಗೆ ಜಮಾ ಮಾಡಿರುವ ಹಿನ್ನೆಲೆಯಲ್ಲಿ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಲೋಕಾಯುಕ್ತ ಕಚೇರಿಯ ತನಿಖಾಧಿಕಾರಿಗಳ ಮುಂದೆ ಲಿಖಿತ ಹಾಗೂ ಮೌಖಿಕ ರೂಪದಲ್ಲಿ ತಿಳಿಸಿದ್ದರೂ ಕೂಡ ಗಣನೆಗೆ ತೆಗೆದುಕೊಳ್ಳದೇ ತಮಗೆ ಎರಡು ವಾರ್ಷಿಕ ಮುಂಬಡ್ತಿಗಳನ್ನು ತಡೆಹಿಡಿಯಲು ಶಿಫಾರಸ್ಸು ಮಾಡಿರುವುದು ಸಾಮಾಜಿಕ ನ್ಯಾಯ, ಸುಪ್ರೀಂ ಕೋರ್ಟ್, ಹೈಕೋರ್ಟ್‌ಗಳು ನೀಡಿರುವ ಆದೇಶ ಮತ್ತು ಕೆ.ಸಿ.ಎಸ್., ಸಿಸಿಎ ನಿಯಮಗಳ ವಿರುದ್ಧವಾಗುತ್ತದೆ ಎಂದು ತಿಳಿಸಿರುತ್ತಾರೆ.

ಆದುದರಿಂದ ಮೇಲಿನ ಎಲ್ಲಾ ವಿವರಗಳನ್ನು ಸರ್ಕಾರದ ಹಂತದಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಮಾನ್ಯ ಲೋಕಾಯುಕ್ತರು ವಿಚಾರಣಾಧಿಕಾರಿಗಳ ವರದಿ ಆಧಾರದ ಮೇಲೆ ದಿನಾಂಕ: 07.10.2017ರಂದು ತಮಗೆ ಎರಡು ವಾರ್ಷಿಕ ಮುಂಬಡ್ತಿಗಳನ್ನು

ತಡೆಹಿಡಿಯಲು ಶಿಫಾರಸ್ಸು ಮಾಡಿರುವ ದಂಡನೆಯನ್ನು ಪುನರ್‌ಪರಿಶೀಲಿಸಿ ತಮ್ಮನ್ನು ಈ ಪ್ರಕರಣದಿಂದ ದೋಷಮುಕ್ತಗೊಳಿಸಿ ಸರ್ಕಾರದ ಆದೇಶ ನೀಡಬೇಕೆಂದು ವಿನಂತಿಸಿರುತ್ತಾರೆ'.

ಮೇಲಿನಂತೆ, ಶ್ರೀ ಪಿ.ವಿಶ್ವನಾಥ್, ಸಹಾಯಕ ಇಂಜಿನಿಯರ್ ಇವರು ಸರ್ಕಾರಕ್ಕೆ 2ನೇ ಕಾರಣ ಕೇಳುವ ನೋಟೀಸ್‌ಗೆ ಸಲ್ಲಿಸಿರುವ ಸಮಜಾಯಿಷಿ/ಲಿಖಿತ ಹೇಳಿಕೆಗಳು, ಲೋಕಾಯುಕ್ತ ವಿಚಾರಣಾ ವರದಿ ಹಾಗೂ ಸರ್ಕಾರಕ್ಕೆ ಒದಗಿಸಿರುವ ದಾಖಲೆಗಳೊಂದಿಗೆ ವಿರ್ಮಶೆಗೆ ಒಳಪಡಿಸಲಾಗಿದ್ದು, ಆಪಾದಿತ ಅಧಿಕಾರಿಯಾದ (DGO-4) ಶ್ರೀ ಪಿ.ವಿಶ್ವನಾಥ್ ಇವರಿಗೆ ಸಂಬಂಧಿಸಿದಂತೆ ಮಾನ್ಯ ಲೋಕಾಯುಕ್ತ ರವರು ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ: 07/10/2017ರ ವರದಿಯಲ್ಲಿ ಈ ಕೆಳಕಂಡಂತೆ ಪ್ರಮುಖ ಅಂಶಗಳು ಪ್ರಸ್ತಾಪವಾಗಿದ್ದು, ಅದರ ಉದ್ಧೃತ ಭಾಗವನ್ನು ಈ ಕೆಳಗಿನಂತೆ ತರಲಾಗಿದೆ.

a) You-DGO, Nos.3, 4 and 5 (respondent Nos.1, 2 and 3 in 12(3) report) are responsible for excess payment of Rs.1,49,968/- made to the concerned contractor in respect of the work entrusted for construction of vehicle stand at the premises of JMFC Court, Siddapura. The said excess amount has been released to the contractor without completion of the works entrusted to him. The actual cost of the work carried out by the contractor is of Rs.56,160/-, but You-DGO., Nos.3, 4 and 5(respondent Nos.1, 2 and 3 in 12(3) report) without verifying the actual work done by the contractor have released excess amount of Rs.1,49,968/-, hence you are responsible to that effect i.e,. for release of said excess amount.

11. The DGO-4 while denying the charges levelled against him has admitted the excess payment of Rs.1,49,968/-(Rupees one lakh forty nine thousand nine hundred and sixty eight) made to the

contractor. It is his specific case that the said payment was made on the basis of oral instruction of the DGO-3, who was incharge of the post of the Assistant Executive Engineer and his official superior.

"17. That, but in this case, the DGO-4 and DGO-3, i.e., the AEE and SO have erred in execution of works and also its, due completion. And even they have prepared the false bills. It is the whole responsibility of Sub divisional Office and Section Officer to execute the work and to prepare a bill which is executed and completed as per estimate. If they have recorded full and prepared the bill 100% without completion means it is total violation of all norms by them. They are the only responsible officers for this excess payment of Rs.1,49,968/-.

20. That, the excess payment made by the DGO-3 and DGO-4 to the contractor was detected and said amount of Rs. 1,49,968/- was recovered on 5.1.2-11 in the Govt. Treasury.

23. It is the sole responsibility of AEEs and SOs. They should have stopped the payment by not recording the bill. It is the mistake done by AEE and SO. The spot inspection and 100% verfification lies with AEE.

ಮೇಲೆ ಓದಲಾದ (1)ರ ಕಡತದಲ್ಲಿ ಲೋಕೋಪಯೋಗಿ ಇಲಾಖೆಯು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸಲ್ಲಿಸಿದ್ದ ಪ್ರಸ್ತಾವನೆಯಲ್ಲಿ ರಾಮನಗರ ಜಿಲ್ಲೆ, ಮಾಗಡಿ ಲೋಕೋಪಯೋಗಿ ಉಪ ವಿಭಾಗದಲ್ಲಿ 2011-12ನೇ ಸಾಲಿನಲ್ಲಿ ನಡೆದ ರಸ್ತೆ ಕಾಮಗಾರಿಗಳ ಅಂದಾಜು ತಯಾರಿಕೆ, ಟೆಂಡರ್ ಪ್ರಕ್ರಿಯೆ, ಕಾಮಗಾರಿ ಅನುಷ್ಠಾನ, ಬಿಲ್ ಪಾವತಿಗಳಲ್ಲಿ ವ್ಯಾಪಕ ಅವ್ಯವಹಾರ

ನಡೆದಿರುವುದಾಗಿ ಸಾರ್ವಜನಿಕರಿಂದ ದೂರು ದಾಖಲಾದ ಹಿನ್ನೆಲೆಯಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ(ದಕ್ಷಿಣ), ಬೆಂಗಳೂರು ಇವರು ತನಿಖೆ ಕೈಗೊಂಡು ವರದಿ ಸಲ್ಲಿಸಲು ನೇಮಿಸಿದ ಪರಿವೀಕ್ಷಣಾ ತಂಡವು ದಿನಾಂಕ: 31.08.2012ರಂದು ಪ್ರಾಥಮಿಕ ತನಿಖಾ ವರದಿಯನ್ನು ಸಲ್ಲಿಸಿದ್ದು, ಈ ವರದಿಯನ್ನು ಪರಿಶೀಲಿಸಿ ವಿಸ್ತೃತ ತನಿಖೆ ನಡೆಸಲು ರಚಿಸಲಾದ ಅಧೀಕ್ಷಕ ಅಭಿಯಂತರರು, ಗುಣ ಭರವಸೆ ವೃತ್ತ, ಬೆಂಗಳೂರು ಹಾಗೂ ಪರಿವೀಕ್ಷಣಾ ತಂಡದ ದಿನಾಂಕ: 01.04.2013ರ ತನಿಖಾ ವರದಿ 1 ಮತ್ತು 2ರಲ್ಲಿ ಈ ಪ್ರಕರಣದಲ್ಲಿ ವ್ಯಾಪಕ ಅವ್ಯವಹಾರ ನಡೆದಿರುವುದಾಗಿ ವರದಿ ನೀಡಿದ ಹಿನ್ನೆಲೆಯಲ್ಲಿ ಶ್ರೀ ಸದಾಶಿವ ರೆಡ್ಡಿ ಬಿ.ಪಾಟೀಲ್, ನಿವೃತ್ತ ಮುಖ್ಯ ಇಂಜಿನಿಯರ್(ಸ್ವತಂತ್ರ ಪ್ರಭಾರ) ಹಾಗೂ ಇತರ 11 ಜನ ಅಧಿಕಾರಿಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸುವಂತೆ ಲೋಕೋಪಯೋಗಿ ಇಲಾಖೆಯು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ 11 ಜನ ಅಧಿಕಾರಿಗಳಲ್ಲಿ ಶ್ರೀ ಆರ್.ಗೋವಿಂದರಾಜು, ಜಂಟಿ ನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ನಿಯೋಜನೆಯ ಮೇಲೆ ಜಂಟಿ ನಿಯಂತ್ರಕರು(ಹಣಕಾಸು), ಪೊಲೀಸ್ ಮಹಾನಿರ್ದೇಶಕರು ಹಾಗೂ ಆರಕ್ಷಕ ಮಹಾನಿರೀಕ್ಷಕರ ಕಛೇರಿ, ಬೆಂಗಳೂರು ಇವರು ಸಹ ಒಬ್ಬರಾಗಿರುತ್ತಾರೆ.

ಮೇಲೆ ಓದಲಾದ (2)ರ ಆದೇಶದಲ್ಲಿ ರಾಮನಗರ ಜಿಲ್ಲೆ, ಮಾಗಡಿ ಲೋಕೋಪಯೋಗಿ ಉಪ ವಿಭಾಗದಲ್ಲಿ 2011-12ನೇ ಸಾಲಿನಲ್ಲಿ ನಡೆದ ರಸ್ತೆ ಕಾಮಗಾರಿಗಳ ಅಂದಾಜು ತಯಾರಿಕೆ, ಟೆಂಡರ್ ಪ್ರಕ್ರಿಯೆ, ಕಾಮಗಾರಿ ಅನುಷ್ಟಾನ, ಬಿಲ್ ಪಾವತಿಗಳಲ್ಲಿ ನಡೆಸಿದ ಅವ್ಯವಹಾರದ ಕುರಿತ ಪ್ರಕರಣದಲ್ಲಿ ಇತರೆ ಅಧಿಕಾರಿಗಳನ್ನೊಳಗೊಂಡಂತೆ ಶ್ರೀ ಆರ್.ಗೋವಿಂದರಾಜು, ಜಂಟಿ ನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ನಿಯೋಜನೆಯ ಮೇಲೆ ಜಂಟಿ ನಿಯಂತ್ರಕರು(ಹಣಕಾಸು), ಪೊಲೀಸ್ ಮಹಾನಿರ್ದೇಶಕರು ಹಾಗೂ ಆರಕ್ಷಕ ಮಹಾನಿರೀಕ್ಷಕರ ಕಛೇರಿ, ಬೆಂಗಳೂರು ಇವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ-13ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಆದೇಶಿಸಿರುತ್ತದೆ.

ಮೇಲೆ ಓದಲಾದ(3)ರ ಆದೇಶದಲ್ಲಿ ಶ್ರೀ ಆರ್.ಗೋವಿಂದರಾಜು, ಜಂಟಿ ನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಇವರ ವಿರುದ್ಧದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 14-ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾನ್ಯ ಲೋಕಾಯುಕ್ತದ ಮೂಲಕ ನಡೆಸಬೇಕೆಂದು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (4)ರ ಆದೇಶದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 7(2ಎ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಆರ್.ಗೋವಿಂದರಾಜು, ಜಂಟಿ ನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಇವರ ವಿರುದ್ಧದ ಆರೋಪಗಳ ಕುರಿತು ತನಿಖೆಯನ್ನು ಸನ್ಮಾನ್ಯ ಲೋಕಾಯುಕ್ತರ ಮೂಲಕ ನಡೆಯಬೇಕೆಂದು ಆದೇಶಿಸಸಲಾಗಿರುತ್ತದೆ. ಈ ಕಾರಣದಿಂದಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 14-ಎ ರನ್ವಯ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸಿದ್ದ ದಿನಾಂಕ: 13/08/2014ರ ಸರ್ಕಾರಿ ಆದೇಶ ಸಂಖ್ಯೆ: ಆಇ 237 ರಾಲೆಪ 2013ನ್ನು ರದ್ದುಪಡಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (5)ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ-14ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಆರ್.ಗೋವಿಂದರಾಜು, ಜಂಟಿ ನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಇವರ ವಿರುದ್ಧದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಲೋಕಾಯುಕ್ತ ರವರ ಮೂಲಕ ನಡೆಯಬೇಕೆಂದು ಮತ್ತೊಮ್ಮೆ ಆರ್ಥಿಕ ಇಲಾಖೆಯು ಆದೇಶಿಸಿರುತ್ತದೆ.

ಮೇಲಿನ ಅಂಶಗಳಿಂದಾಗಿ ರಾಮನಗರ ಜಿಲ್ಲೆ, ಮಾಗಡಿ ಲೋಕೋಪಯೋಗಿ ಇಲಾಖೆ ಉಪವಿಭಾಗದಲ್ಲಿ 2011-12ನೇ ಸಾಲಿನಲ್ಲಿ ನಡೆದ ರಸ್ತೆ ಕಾಮಗಾರಿಗಳ ಅಂದಾಜು ತಯಾರಿಕೆ, ಟೆಂಡರ್ ಪ್ರಕ್ರಿಯೆ, ಕಾಮಗಾರಿ ಅನುಷ್ಠಾನ, ಬಿಲ್ ಪಾವತಿಯಲ್ಲಿನ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಶ್ರೀ ಆರ್.ಗೋವಿಂದರಾಜ್, ಹಿಂದಿನ ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ ಇವರ ವಿರುದ್ಧ ಈ ಕೆಳಗಿನಂತೆ ಇಲಾಖಾ ವಿಚಾರಣೆಗಳನ್ನು ಹೂಡಲಾಗಿರುತ್ತದೆ.

1) ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮಗಳು, 1957ರ ನಿಯಮ 14-ಎ ರಡಿಯಲ್ಲಿ ಅಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಆರ್ಥಿಕ ಇಲಾಖೆಯು ಆದೇಶ ಸಂಖ್ಯೆ: ಆಇ 237 ರಾಲೆಪ 2013, ದಿನಾಂಕ: 13/08/2014ರಂದು ಮಾನ್ಯ ಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿರುತ್ತದೆ.

2) ಶ್ರೀ ಆರ್.ಗೋವಿಂದರಾಜ್, ರವರು ಸೇರಿದಂತೆ ಪ್ರಕರಣದಲ್ಲಿ ಭಾಗಿಯಾದ ಇತರೆ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮಗಳು, 1957ರ ನಿಯಮ 13ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶ ಸಂಖ್ಯೆ: ಸಿಆಸುಇ 05 ಇಮುವಿ 2014, ದಿನಾಂಕ: 11/04/2016ರಲ್ಲಿ ಪ್ರಾರಂಭಿಸಿರುತ್ತದೆ.

ಒಂದೇ ಆರೋಪಗಳಿಗೆ (Charges) ಸಂಬಂಧಿಸಿದಂತೆ ಎರಡು ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿ; i..... ಒಂದೇ ಆರೋಪಗಳಿಗೆ ಸಂಬಂಧಿಸಿದಂತೆ ಏಕ ಕಾಲಕ್ಕೆ ಇಲಾಖಾ ವಿಚಾರಣೆ ಮತ್ತು ಕ್ರಿಮಿನಿಲ್ ವಿಚಾರಣೆಯನ್ನು ನಡೆಸಲು ಮಾತ್ರ ಕಾನೂನಿನಲ್ಲಿ ಅವಕಾಶವಿದ್ದು, ಒಂದೇ ವಿಧವಾದ ಆರೋಪಗಳಿಗೆ ಸಂಬಂಧಿಸಿದಂತೆ ಏಕಕಾಲಕ್ಕೆ ಎರಡೆರಡು ಇಲಾಖಾ/ಶಿಸ್ತು ವಿಚಾರಣೆಗಳನ್ನು ನಡೆಸಲು ಅವಕಾಶವಿರುವುದಿಲ್ಲ/ ಎಂದು ಅಭಿಪ್ರಾಯ ನೀಡಿರುತ್ತದೆ.

ಆದ್ದರಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶ ಸಂಖ್ಯೆ: ಸಿಆಸುಇ 05 ಇಮುವಿ 2014, ದಿನಾಂಕ: 11-04-2016ರಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಆರೋಪಗಳ ಕುರಿತು ಜಂಟಿ ಇಲಾಖಾ ವಿಚಾರಣೆಯಿಂದ ಶ್ರೀ ಆರ್. ಗೋವಿಂದರಾಜ್, ಹಿಂದಿನ ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ ಇವರ ವಿರುದ್ಧದ ಇದೇ ಆರೋಪಗಳಿಗೆ ಸಂಬಂಧಿಸಿದಂತೆ ಮಾನ್ಯ ಲೋಕಾಯುಕ್ತದಲ್ಲಿ ಇಲಾಖಾ ವಿಚಾರಣೆ ನಡೆಯುತ್ತಿರುವುದರಿಂದ ಪ್ರಸ್ತುತ ಜಂಟಿ ಇಲಾಖಾ ವಿಚಾರಣೆ ಪ್ರಕರಣದಲ್ಲಿ ಶ್ರೀ ಆರ್.ಗೋವಿಂದರಾಜ್ ಇವರೊಬ್ಬರನ್ನು ಮಾತ್ರ ಕೈಬಿಟ್ಟು ಆದೇಶಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 122 ಸೇಮುಇ 2018

ಬೆಂಗಳೂರು, ದಿನಾಂಕ: 25/02/2021.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಆರ್.ಗೋವಿಂದರಾಜ್, ಹಿಂದಿನ ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ ಇವರ ವಿರುದ್ಧದ ಆರೋಪಗಳ ಕುರಿತು ಸರ್ಕಾರದ ಆದೇಶ ಸಂಖ್ಯೆ: ಆಇ 237 ರಾಲೆಪ 2013, ದಿನಾಂಕ: 16-11-2017ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ-14ಎ ರನ್ವಯ ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಲೋಕಾಯುಕ್ತ ರವರ ಮೂಲಕ ನಡೆಯಬೇಕೆಂದು ಆದೇಶಿಸಿರುವುದರಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶ ಸಂಖ್ಯೆ: ಸಿಆಸುಇ 05 ಇಮುವಿ 2014, ದಿನಾಂಕ: 11-04-2016ರಲ್ಲಿ ಹೂಡಲಾಗಿರುವ ಆರೋಪಗಳ ಸಂಬಂಧದ ಜಂಟಿ ಇಲಾಖಾ

ವಿಚಾರಣೆಯಿಂದ ಶ್ರೀ ಆರ್.ಗೋವಿಂದರಾಜ್ ಇವರೊಬ್ಬರನ್ನು ಮಾತ್ರ ಕೈಬಿಟ್ಟು ಆದೇಶಿಸಿದೆ. ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 05 ಇಮುವಿ 2014, ದಿನಾಂಕ: 11-04-2016ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ನಾಗೇಶ ರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

PR-828

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ನೌಕರರಿಗೆ ಮಂಜೂರು ಮಾಡುತ್ತಿರುವ ಹಬ್ಬದ ಮುಂಗಡದ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: 1. ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು, ಇವರ ಮನವಿ ಪತ್ರ ದಿನಾಂಕ:04/12/2021.

2. ಸರ್ಕಾರದ ಆದೇಶ ಸಂಖ್ಯೆ: ಆಇ 19 ಮಕಮು 2018, ದಿನಾಂಕ:11/01/2019.

ಪ್ರಸ್ತಾವನೆ:

ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ದಿನಾಂಕ:04/12/2021 ರ ಪತ್ರದಲ್ಲಿ ದಿನಾಂಕ:28/10/2021 ರಂದು ನಡೆದ ರಾಜ್ಯ ಮಟ್ಟದ ಜಂಟಿ ಸಮಾಲೋಚನಾ ಸಮಿತಿ ಸಭೆಯಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಹಬ್ಬದ ಮುಂಗಡದ ಮೊತ್ತವನ್ನು ರೂ.10,000/- ಗಳಿಂದ ರೂ.25,000/- ಗಳಿಗೆ ಹೆಚ್ಚಳ ಮಾಡುವ ಬಗ್ಗೆ ಚರ್ಚಿಸಿ, ಈ ಬಗ್ಗೆ ಆರ್ಥಿಕ ಇಲಾಖೆಯು ಪರಿಶೀಲಿಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು, ಇವರು, ರಾಜ್ಯ ಸರ್ಕಾರಿ ನೌಕರರಿಗೆ ಮಂಜೂರು ಮಾಡುತ್ತಿರುವ ಹಬ್ಬದ ಮುಂಗಡವನ್ನು ರೂ.10,000/- ಗಳಿಂದ ರೂ.25,000/- ಗಳಿಗೆ ಹೆಚ್ಚಳ ಮಾಡುವಂತೆ ಕೋರಿರುತ್ತಾರೆ.

ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ದಿನಾಂಕ:11/01/2019 ರ ಆದೇಶದಲ್ಲಿ 6ನೇ ವೇತನ ಆಯೋಗದ ಶಿಫಾರಸ್ಸಿನ ಮೇರೆಗೆ ರಾಜ್ಯ ಸರ್ಕಾರಿ ನೌಕರರಿಗೆ ಮಂಜೂರು ಮಾಡುತ್ತಿದ್ದ ಹಬ್ಬದ ಮುಂಗಡವನ್ನು ರೂ.5,000/- ಗಳಿಂದ ರೂ.10,000/- ಗಳಿಗೆ ಹೆಚ್ಚಿಸಿ ಆದೇಶಿಸಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು, ರಾಜ್ಯ ಸರ್ಕಾರಿ ನೌಕರರಿಗೆ ನೀಡಲಾಗುತ್ತಿರುವ ಹಬ್ಬದ ಮುಂಗಡವು ಬಡ್ಡಿ ರಹಿತವಾಗಿದ್ದು, ಅದನ್ನು ಪಡೆದ ಮುಂದಿನ 10 ತಿಂಗಳ ಅವಧಿಯಲ್ಲಿ ಮರುಪಾವತಿಯಾಗುವುದರಿಂದ ಹಬ್ಬದ ಮುಂಗಡವನ್ನು ಪರಿಷ್ಕರಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 8 ಮಕಮು 2021,
ಬೆಂಗಳೂರು, ದಿನಾಂಕ: 14/12/2021.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯ ಸಿವಿಲ್ ಸೇವಾ ವೃಂದದಲ್ಲಿ ಖಾಯಂ ಆಗಿ ಸೇರ್ಪಡೆಯಾಗಿರುವ ಅಖಿಲ ಭಾರತ ಸೇವೆಯ ಅಧಿಕಾರಿಗಳು ಸೇರಿದಂತೆ ಒಬ್ಬ ಖಾಯಂ ಸರ್ಕಾರಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ಒಂದು ಬಾರಿಗೆ ಮಾತ್ರ ಪ್ರಸ್ತುತ ಮಂಜೂರು ಮಾಡಲಾಗುತ್ತಿರುವ ಬಡ್ಡಿ ರಹಿತ ಹಬ್ಬದ ಮುಂಗಡವನ್ನು ತಕ್ಷಣದಿಂದ ಜಾರಿಗೆ ಬರುವಂತೆ **ರೂ.10,000/- ಗಳಿಂದ ರೂ.25,000/- ಗಳಿಗೆ** ಹೆಚ್ಚಿಸಿ ಆದೇಶಿಸಿದೆ.

ದಿನಾಂಕ:21/10/1994 ರ ಸರ್ಕಾರಿ ಆದೇಶ ಸಂಖ್ಯೆ: ಆಇ 48 ಮಕಮು 1994 ರಲ್ಲಿ ಮುಂಗಡಗಳನ್ನು ಮಂಜೂರು ಮಾಡಲು ಅನುಸರಿಸುತ್ತಿರುವ ಷರತ್ತು ಮತ್ತು ನಿಬಂಧನೆಗಳು ಮುಂದುವರೆದು ಅನ್ವಯಿಸುತ್ತವೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನೇತ್ರಪ್ರಭಾ ಎಂ. ಧಾಯಪುಲೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು).

PR-829

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಜಯನಗರ ನೂತನ ಜಿಲ್ಲೆ ರಚಿಸಿರುವ ಕಾರಣ ಹೊಸಪೇಟೆ ಉಪ ಖಜಾನೆಯನ್ನು ವಿಜಯನಗರ ಜಿಲ್ಲಾ ಖಜಾನೆಯನ್ನಾಗಿ ಪರಿವರ್ತಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ ಖ್ಯೆ:ಕಂಇ/4/ಎಲ್.ಆರ್.ಡಿ/2019 ದಿನಾಂಕ:08-02-2021.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇ-ಸಿಆಸುಇ/100/ಸೆಅಸೆ/2021, ದಿನಾಂಕ:26-02-2021
3. ಖಜಾನೆ ಆಯುಕ್ತರು, ಬೆಂಗಳೂರು ಇವರ ಪತ್ರ ಸಂಖ್ಯೆ:ಖನಿ/ಪ್ರಕ್ರಿಯೆ/100/2020-21 ದಿನಾಂಕ: 22-09-2021.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರದ ಅಧಿಸೂಚನೆಯಲ್ಲಿ, ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ, ಹೊಸಪೇಟೆ ಕೇಂದ್ರಸ್ಥಾನವನ್ನಾಗಿಸಿ, ನೂತನ ವಿಜಯನಗರ ಜಿಲ್ಲೆಯನ್ನು ರಚಿಸಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ನೂತನ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಕಛೇರಿಗಳ ಕಾರ್ಯಾರಂಭ ಮಾಡುವ ಸಲುವಾಗಿ ಹುದ್ದೆಗಳ ವಿವರಗಳನ್ನು ನಿಗದಿಪಡಿಸಿ, ಇದಕ್ಕೆ ಬೇಕಾಗಿರುವ ಕಟ್ಟಡಗಳು ಮತ್ತು ಸಾಮಗ್ರಿಗಳು ಹಾಗೂ ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಲು ಶ್ರೀ ಅನಿರುದ್ ಶ್ರವಣ್. ಪಿ., ಭಾ.ಆ.ಸೇ, ಆಯುಕ್ತರು, ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಬೆಂಗಳೂರು ಇವರನ್ನು ವಿಜಯನಗರ ಜಿಲ್ಲೆಯ ವಿಶೇಷ ಅಧಿಕಾರಿಯನ್ನಾಗಿ ಮೇಲೆ ಓದಲಾದ ಕ್ರ.ಸಂ: (2)ರ ಅಧಿಸೂಚನೆಯಲ್ಲಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ. (3) ಖಜಾನೆ ಆಯುಕ್ತರ ಪ್ರಸ್ತಾವನೆಯಲ್ಲಿ ನೂತನವಾಗಿ ವಿಜಯನಗರ ಜಿಲ್ಲೆಯನ್ನು ರಚಿಸಿರುವುದರಿಂದ ಹೊಸಪೇಟೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪ ಖಜಾನೆಯನ್ನು ವಿಜಯನಗರ ಜಿಲ್ಲಾ ಖಜಾನೆಯನ್ನಾಗಿ ಪರಿವರ್ತಿಸಲು, ಹಾಗೂ ಈ ಕೆಳಕಂಡಂತೆ ಹುದ್ದೆಗಳನ್ನು ಸೃಜನೆ ಮತ್ತು ಮರುವಿನ್ಯಾಸಗೊಳಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಕ್ರ.ಸಂ.	ಹುದ್ದೆಗಳ ವಿವರ	ಹೊಸಪೇಟೆ ತಾಲ್ಲೂಕು ಖಜಾನೆಯಲ್ಲಿ ಹಾಲಿ ಇರುವ ಹುದ್ದೆ ಸಂಖ್ಯೆ	ಬಳ್ಳಾರಿ ಜಿಲ್ಲಾ ಖಜಾನೆಯಿಂದ ಮರು ವಿನ್ಯಾಸಗೊಳಿಸಬೇಕಾದ ಹುದ್ದೆ ಸಂಖ್ಯೆ	ಸೃಜಿಸಬೇಕಾದ ಹುದ್ದೆ ಸಂಖ್ಯೆ	ಒಟ್ಟು
1.	ಉಪ ನಿರ್ದೇಶಕರು	0	0	1	1

2.	ಸಹಾಯಕ ನಿರ್ದೇಶಕರು	1	0	0	1
2	ಸಹಾಯಕ ಖಜಾನಾಧಿಕಾರಿ	0	0	2	2
3	ಮುಖ್ಯ ಲೆಕ್ಕಿಗರು	3	3	2	8
4	ಪ್ರಥಮ ದರ್ಜೆ ಸಹಾಯಕರು	4	8	4	16
5	ದ್ವಿತೀಯ ದರ್ಜೆ ಸಹಾಯಕರು	1	4	2	7
6	ಬೆರಳಚ್ಚುಗಾರರು	0	0	1	1
7	ಗ್ರೂಪ್-ಡಿ	1	0	2	3
ಒಟ್ಟು					**39**

ಆಯುಕ್ತರು, ಖಜಾನೆ ಇಲಾಖೆರವರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 162 ಆಖಇ 2021 ಬೆಂಗಳೂರು, ದಿನಾಂಕ:26ನೇ ನವೆಂಬರ್ 2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಹೊಸದಾಗಿ ಸೃಜಿಸಲಾದ ವಿಜಯನಗರ ಜಿಲ್ಲಾ ಖಜಾನೆ ವ್ಯಾಪ್ತಿಗೆ ಬರುವ ಈ ಕೆಳಕಂಡ ಉಪ ಖಜಾನೆಗಳನ್ನು ಈಗಿರುವ ಜಿಲ್ಲಾ ಕೇಂದ್ರಗಳ ವ್ಯಾಪ್ತಿಯಿಂದ ಬೇರ್ಪಡಿಸಿ ಹೊಸ ಜಿಲ್ಲಾ ಖಜಾನೆಯ ವ್ಯಾಪ್ತಿಗೆ ತರಲಾಗಿದೆ.ಈ ನೂತನ ಜಿಲ್ಲಾ ಖಜಾನೆಯು ದಿನಾಂಕ:01-04-2022 ರಿಂದ ಪ್ರತ್ಯೇಕ ಲೆಕ್ಕದಿಂದ ಕಾರ್ಯಾರಂಭ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ನೂತನ ಜಿಲ್ಲಾ ಖಜಾನೆಯ ವ್ಯಾಪ್ತಿಯು ಈ ಕೆಳಕಂಡಂತಿರುತ್ತದೆ.

ನೂತನ ಜಿಲ್ಲಾ ಖಜಾನೆಯ ಹೆಸರು	ಕೇಂದ್ರ ಸ್ಥಾನ	ವ್ಯಾಪ್ತಿಗೆ ಒಳಪಡುವ ಉಪ ಖಜಾನೆಗಳು	ಏಜೆನ್ಸಿ ಬ್ಯಾಂಕ್ ಗಳ ಹೆಸರು
1	2	3	4
ವಿಜಯನಗರ ಜಿಲ್ಲಾ ಖಜಾನೆ	ಹೊಸಪೇಟೆ	ಕೂಡ್ಲಿಗಿ	ಎಸ್.ಬಿ.ಐ
		ಹಗರಿಬೊಮ್ಮನಹಳ್ಳಿ	ಎಸ್.ಬಿ.ಐ
		ಕೊಟ್ಟೂರು	ಎಸ್.ಬಿ.ಐ
		ಹೂವಿನಹಡಗಲಿ	ಎಸ್.ಬಿ.ಐ
		ಹರಪನಹಳ್ಳಿ	ಎಸ್.ಬಿ.ಐ

ಹೊಸದಾಗಿ ರಚನೆಯಾಗಿರುವ ವಿಜಯನಗರ ಜಿಲ್ಲೆಗೆ ಜಿಲ್ಲಾ ಖಜಾನೆ ಸ್ಥಾಪಿಸಲು ಹೊಸಪೇಟೆ ಉಪ ಖಜಾನೆಗೆ ಸೃಜಿಸಲಾಗಿರುವ 10 ಹುದ್ದೆಗಳನ್ನು ಹೊರತುಪಡಿಸಿ ಬಳ್ಳಾರಿ ಜಿಲ್ಲಾ ಖಜಾನೆಯಿಂದ 15 ಹುದ್ದೆಗಳನ್ನು ಈ ಕೆಳಕಂಡಂತೆ ಮರುವಿನ್ಯಾಸಗೊಳಿಸಲು ಅನುಮೋದನೆ ನೀಡಿದೆ.

ಕ್ರ. ಸಂ.	ಹುದ್ದೆಗಳ ವಿವರ	ಹೊಸಪೇಟೆ ಖಜಾನೆಯಲ್ಲಿ ಹಾಲಿ ಇರುವ ಹುದ್ದೆಗಳ ಸಂಖ್ಯೆ	ಬಳ್ಳಾರಿ ಜಿಲ್ಲಾ ಖಜಾನೆಯಿಂದ ಮರುವಿನ್ಯಾಸಗೊಳಿಸಲಾಗಿರುವ ಹುದ್ದೆಗಳ ಸಂಖ್ಯೆ
1	ಉಪ ನಿರ್ದೇಶಕರು	0	0
2	ಸಹಾಯಕ ನಿರ್ದೇಶಕರು	1	0
3	ಸಹಾಯಕ ಖಜಾನಾಧಿಕಾರಿ	0	0
4	ಮುಖ್ಯ ಲೆಕ್ಕಿಗರು	3	3
5	ಪ್ರಥಮ ದರ್ಜೆ ಸಹಾಯಕರು	4	8
6	ದ್ವಿತೀಯ ದರ್ಜೆ ಸಹಾಯಕರು	1	4
7	ಬೆರಳಚ್ಚುಗಾರರು	0	0
8	ಗ್ರೂಪ್-ಡಿ	1	0
	ಒಟ್ಟು	**10**	**15**

- ಖಜಾನೆಗಳಲ್ಲಿ ಪಾವತಿಸುತ್ತಿರುವ ಪಿಂಚಣಿಗಳ ಸಂಬಂಧ ನೂತನ ಜಿಲ್ಲಾ ಖಜಾನೆಗಳಲ್ಲಿ ಜಿಲ್ಲೆಗೆ ಒಳಪಡುವ ಉಪ ಖಜಾನೆಗಳ ಡಾಟಾ ಬೇಸ್‌ನ್ನು ಪ್ರತ್ಯೇಕವಾಗಿ ಇಡುವುದು. ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ ಮೂಲಕ ಪಾವತಿಸುತ್ತಿರುವ ಪಿಂಚಣಿಗಳ ಸಂಬಂಧ ಡಾಟಾ ಬೇಸ್ ಕಾರ್ಯವನ್ನು ಖಜಾನೆಗಳು ಕೈಗೊಂಡಿದ್ದು, ನೂತನ ಜಿಲ್ಲಾ ಖಜಾನೆಗಳ ವ್ಯಾಪ್ತಿಗೆ ಬರುವ ಪಿಂಚಣಿಯನ್ನು ಪ್ರತ್ಯೇಕಗೊಳಿಸಿ ನಿರ್ವಹಿಸುವುದು.
- ವಿಜಯನಗರ ಜಿಲ್ಲೆಯಲ್ಲಿ ಹೊಸದಾಗಿ ಸೃಜಿಸಲಾಗಿರುವ ಹೊಸ ಕಚೇರಿಗಳು ದಿನಾಂಕ:31-03-2022ರವರೆಗೆ ಪ್ರಸ್ತುತ ಸಂಬಂಧಿಸಿದ ಉಪ ಖಜಾನೆಗಳಿಂದಲೇ ವೇತನ, ಭತ್ಯೆ ಮುಂತಾದ ನಗದು ವಹಿವಾಟುಗಳನ್ನು ಸೆಳೆಯುವುದು. ದಿನಾಂಕ:01-04-2022ರಿಂದ ಹೊಸ ಜಿಲ್ಲೆಯಲ್ಲಿನ ಕಚೇರಿಗಳು ನೂತನ ಜಿಲ್ಲಾ ಖಜಾನೆಯಿಂದ ವೇತನ, ಭತ್ಯೆ ಮುಂತಾದ ನಗದು ವಹಿವಾಟುಗಳನ್ನು ಸೆಳೆಯುವುದು ಈ ಕುರಿತು ಮಹಾಲೇಖಪಾಲರು ಪ್ರಾಧೀಕರಿಸಲು ಕ್ರಮಕೈಗೊಳ್ಳುವುದು.
- ದಿನಾಂಕ:01-04-2022ರಿಂದ ನೂತನ ಜಿಲ್ಲಾ ಖಜಾನೆಯ ವ್ಯಾಪ್ತಿಗೊಳಪಡುವ ಉಪ ಖಜಾನೆಗಳು ನೂತನ ಜಿಲ್ಲಾ ಖಜಾನೆಗೆ ಲೆಕ್ಕಗಳನ್ನು ರವಾನಿಸುವುದು.
- ದಿನಾಂಕ:01-04-2022 ರಿಂದ ನೂತನ ಜಿಲ್ಲಾ ಖಜಾನೆಯು ಪ್ರತ್ಯೇಕವಾಗಿ ಲೆಕ್ಕ ನಿರ್ವಹಿಸುವ ಘಟಕವಾಗುವುದರಿಂದ ಕರ್ನಾಟಕ ಖಜಾನೆ ಸಂಹಿತೆ ಅನುಚ್ಛೇದ 133ರ ಪ್ರಕಾರ ಸವಿವರ ಲೆಕ್ಕಗಳನ್ನು (ವ್ಯಾಪ್ತಿಗೊಳಪಡುವ ಉಪ ಖಜಾನೆಗಳ ಲೆಕ್ಕಗಳು ಒಳಗೊಂಡಂತೆ) ಮಹಾಲೇಖಪಾಲರಿಗೆ ಹಾಗೂ ಸಂಬಂಧಿಸಿದ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಗಳಿಗೆ ಕಳುಹಿಸುವುದು.
- ನೂತನ ಜಿಲ್ಲಾ ಖಜಾನೆಯ ಜಿಲ್ಲಾ ಖಜಾನಾಧಿಕಾರಿಗಳು ಅವರ ವ್ಯಾಪ್ತಿಗೊಳಪಡುವ ಉಪ ಖಜಾನೆಗಳಿಗೆ ನಿಯಂತ್ರಣಾಧಿಕಾರಿಗಳಾಗಿದ್ದು, ಅವುಗಳ ಸಮರ್ಪಕ ಕಾರ್ಯ ನಿರ್ವಹಣೆಗೆ ಜವಾಬ್ದಾರರಾಗಿರುತ್ತಾರೆ.

- ನೂತನ ಜಿಲ್ಲಾ ಖಜಾನೆ ಹಾಗೂ ಅದರ ವ್ಯಾಪ್ತಿಯೊಳಗಿರುವ ಉಪ ಖಜಾನೆಗಳ ನಗದು ವಹಿವಾಟುಗಳನ್ನು ಈ ಹಿಂದೆ ಇದ್ದ ಏಜೆನ್ಸಿ ಬ್ಯಾಂಕ್ ಗಳು ಮುಂದುವರೆಸಿಕೊಂಡು ಹೋಗುತ್ತವೆ.
- ರಾಜ್ಯ ವಲಯ ಹಾಗೂ ಜಿಲ್ಲಾ ಪಂಚಾಯತ್ ವಲಯದ ಬಿಲ್ಲುಗಳಲ್ಲಿನ ವೆಚ್ಚಕ್ಕೆ ಈಗ ಆಯವ್ಯಯ ನಿಯಂತ್ರಣದ ವ್ಯವಸ್ಥೆಯು ಜಾರಿಯಲ್ಲಿರುವುದರಿಂದ ಹೊಸ ಕಚೇರಿ ಪ್ರಾರಂಭವಾಗುವ ದಿನಾಂಕದವರೆಗೆ ಹಳೆಯ ಕಚೇರಿಯು ಮಾಡಿದ ವೆಚ್ಚಗಳ ಹಾಗೂ ಹೊಸ ಜಿಲ್ಲೆಯಲ್ಲಿನ ಅಧಿಕಾರಿಗಳಿಗೆ ಅನುದಾನ ಬಿಡುಗಡೆಗೊಳಿಸುವುದು.
- ಹೊಸಪೇಟೆ ಉಪ ಖಜಾನೆ ಇರುವ ಕಟ್ಟಡವು ಎರಡು ಮಹಡಿ (Duplex) ಕಟ್ಟಡವಾಗಿದ್ದು ವಿಶಾಲವಾದ ಸ್ಥಳಾವಕಾಶ ಹೊಂದಿರುವುದರಿಂದ, ಈ ಉಪ ಖಜಾನೆಯಲ್ಲಿಯೇ ವಿಜಯನಗರ ಜಿಲ್ಲಾ ಖಜಾನೆಯನ್ನು ಪ್ರಾರಂಭಿಸುವುದು ಹಾಗೂ ಪ್ರಸ್ತುತ ಇರುವ ಹೊಸಪೇಟೆ ಉಪ ಖಜಾನೆಯ ಭದ್ರಕೋಣೆಯನ್ನು ಬಳಸಿಕೊಳ್ಳುವುದು.
- ನೂತನ ಜಿಲ್ಲಾ ಖಜಾನೆಯ ಲೆಕ್ಕ ನಿರ್ವಹಣೆ ಹಾಗೂ ಲೆಕ್ಕಪತ್ರಗಳ ಸಲ್ಲಿಸುವಿಕೆ ಪ್ರಕ್ರಿಯೆಗಳ ಬಗ್ಗೆ ಕರ್ನಾಟಕ ಖಜಾನೆ ಸಂಹಿತೆ ಚೌಕಟ್ಟಿನೊಳಗೆ ಸೂಕ್ತ ಸೂಚನೆಗಳನ್ನು ನೀಡಲು ಖಜಾನೆ ಆಯುಕ್ತರಿಗೆ ಅನುಮತಿ ನೀಡಲಾಗಿದೆ.
- ಹೊಸ ಜಿಲ್ಲೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನೇತ್ರಪ್ರಭಾ ಎಂ. ಧಾಯಪುಲೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು).

PR-830

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನೇಕಾರರ ಪ್ಯಾಕೇಜ್ ಯೋಜನೆ-ವಿಶೇಷ ಘಟಕ / ಗಿರಿಜನ ಉಪ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸಹಾಯಧನ ನೀಡುವ ಯೋಜನೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ವಾಕೈ 44 ಜಕೈಯೋ 2017, ದಿನಾಂಕ: 24.11.2018.
2. ದಿನಾಂಕ:02.07.2021 ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳ / ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯ ನಿರ್ಣಯ.

* * * * *

ಮೇಲೆ(1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ, ರಾಜ್ಯದ ಜವಳಿ ಉದ್ದಿಮೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ / ಜವಳಿ ಸಹಕಾರಿ ಸಂಘ / ಸಂಸ್ಥೆಯ ವತಿಯಿಂದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕ ಪ್ರಾರಂಭಿಸುವುದನ್ನು ಉತ್ತೇಜಿಸುವ ಸಲುವಾಗಿ ಈ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿರುತ್ತದೆ. ಜವಳಿ ಉದ್ದಿಮೆಯನ್ನು ಪ್ರಾರಂಭಿಸುವವರಿಗೆ ವರಮಾನ ಹೆಚ್ಚಿಸಲು ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಒದಗಿಸುವ ಉದ್ದೇಶದಿಂದ ಕೈಮಗ್ಗ ಮತ್ತು ಜವಳಿ ಇಲಾಖೆ

ವತಿಯಿಂದ ನೇಕಾರರ ಪ್ಯಾಕೇಜ್ ಯೋಜನೆಯಡಿ ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಗಳಡಿಯಲ್ಲಿ ರಾಜ್ಯ ಸರ್ಕಾರದ ಸಹಾಯಧನ ನೀಡಲು ಅನುಸರಿಸಬೇಕಾದ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

ಮೇಲೆ(2)ರಲ್ಲಿ ಓದಲಾದ ರಾಜ್ಯ ಅನುಸೂಚಿತ ಜಾತಿಗಳ / ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಎಸ್.ಎಂ.ಇ. ಜವಳಿ / ಸಿದ್ಧ ಉಡುಪು ಘಟಕಗಳಿಗೆ ಬಂಡವಾಳ ವೆಚ್ಚದಲ್ಲಿ 75% ಸಹಾಯಧನ ಮತ್ತು 15% ಬಡ್ಡಿ ಸಹಾಯಧನ ನೀಡಲಾಗುತ್ತಿದ್ದು, ಕಳೆದ 3 ವರ್ಷಗಳಲ್ಲಿ ಒದಗಿಸಿದ ಅನುದಾನಕ್ಕಿಂತ ಹೆಚ್ಚಿನ ಮೊತ್ತದಲ್ಲಿ ಘಟಕಗಳನ್ನು ಮಂಜೂರು ಮಾಡಿದ್ದರಿಂದ ಅನುದಾನ ಕೊರತೆಯುಂಟಾಗಿರುವುದನ್ನು ಗಮನಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ:-

1. ಅಪೂರ್ಣಗೊಂಡಿರುವ ಘಟಕಗಳಿಗೆ ಜೇಷ್ಠತೆಯ ಮೇಲೆ ಮಂಜೂರಾತಿಯಂತೆ ಸಹಾಯಧನ ನೀಡುವುದು.
2. ಮಂಜೂರಾದ ಘಟಕಗಳು ಕೆ.ಎಸ್.ಎಫ್.ಸಿ. ಮತ್ತು ಬ್ಯಾಂಕ್ ಗಳಿಂದ 4% ಬಡ್ಡಿ ದರದಲ್ಲಿ ಸಾಲ ಪಡೆದಿದ್ದಲ್ಲಿ, ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಬಡ್ಡಿ ಸಹಾಯಧನ ನೀಡುವ ಅವಶ್ಯಕತೆಯಿಲ್ಲ.
3. ಹೊಸದಾಗಿ ಮಂಜೂರು ಮಾಡುವ ಘಟಕಗಳಿಗೆ ಸಹಾಯಧನವನ್ನು 75% ಅಥವಾ ಗರಿಷ್ಠ ರೂ.2.00 ಕೋಟಿಗಳಿಗೆ ಮಿತಿಗೊಳಿಸುವುದು.
4. ಕೆ.ಎಸ್.ಎಫ್.ಸಿ. ಮತ್ತು ಬ್ಯಾಂಕ್ ಗಳಿಂದ 4% ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆಯದೇ ಇರುವ ಘಟಕಗಳಿಗೆ ಮಾತ್ರ ಬಡ್ಡಿ ಸಹಾಯಧನ ನೀಡುವುದು.
5. ಎಸ್.ಎಂ.ಇ. ಘಟಕಗಳಿಗೆ ನಿಗದಿಪಡಿಸಿದ ಅನುದಾನದಲ್ಲಿ 25% ಅನುದಾನವನ್ನು ಹೊಸ ಘಟಕಗಳಿಗೆ ಬಂದಿರುವ ಅರ್ಜಿಗಳ ಜೇಷ್ಠತೆಯ ಮೇಲೆ ಸಹಾಯಧನ ಮಂಜೂರು ಮಾಡಬಹುದು.

ಈ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಹೊರಡಿಸಲಾದ ಉಲ್ಲೇಖಿತ(1)ರ ಆದೇಶವನ್ನು ಮಾರ್ಪಡಿಸಿ ಜವಳಿ ಉದ್ದಿಮೆಯಲ್ಲಿ ಹೆಚ್ಚಿನ ಸಂಖ್ಯೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು, ಪರಿಷ್ಕರಿಸಿದ ಅಂಶಗಳೊಂದಿಗೆ ಸಹಾಯಧನ ಬಿಡುಗಡೆ ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಯನ್ನು ಹೊರಡಿಸುವ ಕುರಿತು ಸಚಿವ ಸಂಪುಟದ ಅನುಮೋದನೆಯೊಂದಿಗೆ ಈ ಕೆಳಗಿನಂತೆ ಪರಿಷ್ಕೃತ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 44 ಜಕೈಯೋ 2017(ಭಾ-1) ಬೆಂಗಳೂರು, ದಿನಾಂಕ:10.12.2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಜವಳಿ ಉದ್ದಿಮೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ / ಜವಳಿ ಸಹಕಾರಿ ಸಂಘ / ಸಂಸ್ಥೆಯ ವತಿಯಿಂದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳನ್ನು ಪ್ರಾರಂಭಿಸಲು ಉತ್ತೇಜಿಸುವ ಸಲುವಾಗಿ ನೇಕಾರರ ಪ್ಯಾಕೇಜ್ ಯೋಜನೆ- ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಗಳಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸರ್ಕಾರದಿಂದ ಸಹಾಯಧನ ಬಿಡುಗಡೆ ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಯನ್ನು ಈ ಕೆಳಗಿನಂತೆ ನಿಗದಿಪಡಿಸಿ ಆದೇಶಿಸಿದೆ:-

1. ಎಸ್.ಎಂ.ಇ (Small & Micro Enterprises: Investment in Plant & Machinery) ಘಕಟದ ವಿವರ:

   - Micro - ರೂ.1.00 ಕೋಟಿಗಳವರೆಗಿನ ಯಂತ್ರೋಪಕರಣಗಳೊಂದಿಗೆ ಸ್ಥಾಪಿಸುವ ಘಟಕ
   - Small- ರೂ.1.00 ಕೋಟಿಯಿಂದ ರೂ.10.00 ಕೋಟಿಗಳವರೆಗಿನ ಯಂತ್ರೋಪಕರಣ ಗಳೊಂದಿಗೆ ಸ್ಥಾಪಿಸುವ ಘಟಕ.

ಯೋಜನೆಯ ಅರ್ಹತೆ:

I. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಸಂಘ / ಸಂಸ್ಥೆಗಳು / ಕಂಪನಿ ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರತಕ್ಕದ್ದು.

II. ಸಹಕಾರ ಕಾಯ್ದೆಯಡಿ ನೊಂದಾಯಿತ ಜವಳಿ ಸಹಕಾರ ಸಂಘಗಳು ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರತಕ್ಕದ್ದು.

III. ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಘಟಕ ಸ್ಥಾಪಿಸಲು ಉದ್ದೇಶಿಸಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ / ಜವಳಿ ಸಹಕಾರ ಸಂಘ / ಸಂಸ್ಥೆಯ ಹೆಸರಿನಲ್ಲಿ ಭೂ-ಪರಿವರ್ತನೆಯಾಗಿ ಕೈಗಾರಿಕೆಗೆ ಯೋಗ್ಯವಾದ ಜಮೀನು ಹೊಂದಿರತಕ್ಕದ್ದು ಅಥವಾ ಕೆ.ಐ.ಎ.ಡಿ.ಬಿ. / ಕೆ.ಎಸ್.ಎಸ್.ಐ.ಡಿ.ಸಿ. ಯಿಂದ ಕೈಗಾರಿಕಾ ನಿವೇಶನ ಹಂಚಿಕೆಯಾದ ಬಗ್ಗೆ ಸ್ವಾಧೀನ ಪತ್ರ ಹಾಗೂ ನೊಂದಾಯಿತ ಲೀಸ್ ಕಮ್ ಸೇಲ್ ಅಗ್ರಿಮೆಂಟ್ ಹೊಂದಿರತಕ್ಕದ್ದು ಅಥವಾ ಕನಿಷ್ಠ 25 ವರ್ಷಗಳ ದೀರ್ಘಾವಧಿ ಕಾಲಕ್ಕೆ ಸ್ಥಳೀಯ ನೊಂದಾಣಾಧಿಕಾರಿಗಳಿಂದ ನೊಂದಾಯಿಸಲ್ಪಟ್ಟ ಭೂಮಿ / ಕಟ್ಟಡವನ್ನು ಬಾಡಿಗೆ / ಲೀಸ್ ಗಾಗಿ ಹೊಂದಿರತಕ್ಕದ್ದು.

IV. ಜವಳಿ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುವ ಜವಳಿ ಸಹಕಾರ ಸಂಘ / ಎನ್.ಜಿ.ಒ. / ಟ್ರಸ್ಟ್ / ಸಂಸ್ಥೆಗಳು ನೊಂದಾಯಿಸಿ ಕನಿಷ್ಠ 03 ವರ್ಷಗಳಾಗಿರಬೇಕು.

V. ಜವಳಿ ಸಹಕಾರ ಸಂಘ / ಸಂಸ್ಥೆಯವರು ಸಣ್ಣ ಪ್ರಮಾಣದಲ್ಲಿ ಸ್ಥಾಪಿಸುವ ಘಟಕದಲ್ಲಿ ತಾಂತ್ರಿಕ ಅರ್ಹತೆ (Diploma /B.Tech(Textile)/ ಅನುಭವವುಳ್ಳ ಕನಿಷ್ಠ ಒಬ್ಬರನ್ನು ನೇಮಕಾತಿ ಮಾಡತಕ್ಕದ್ದು.

2. <u>ಅ. ಹಣಕಾಸಿನ ಮೂಲ:-</u>

a) ಯೋಜನೆಯ ಅನುಷ್ಠಾನವನ್ನು ಸುಗಮಗೊಳಿಸಲು ಬ್ಯಾಂಕ್ / ಹಣಕಾಸು ಸಂಸ್ಥೆಗಳು ಉದ್ದೇಶಿತ ಯೋಜನಾ (ಸ್ಥಿರಾಸ್ತಿಗಳ) ಮೊತ್ತದ ಶೇ.90 ರಷ್ಟು ಸಾಲವನ್ನು ನೀಡಬಹುದಾಗಿದ್ದು, ಕನಿಷ್ಠ ಶೇ.50 ರಷ್ಟು ಸಾಲವನ್ನು ಯೋಜನಾ ಫಲಾನುಭವಿಗಳು ಪಡೆಯತಕ್ಕದ್ದು.

b) ಬ್ಯಾಂಕ್ / ಹಣಕಾಸು ಸಂಸ್ಥೆಯು ಸಾಲಕ್ಕೆ ಮಾತ್ರ ಪೂರಕ ಭದ್ರತೆ (Collateral Security) ಯನ್ನು First Charge ನೊಂದಿಗೆ ಪಡೆಯತಕ್ಕದ್ದು.

c) ಬ್ಯಾಂಕ್ / ಹಣಕಾಸು ಸಂಸ್ಥೆಯಿಂದ ಘಟಕಕ್ಕೆ ಮಂಜೂರಾದ ಒಟ್ಟು ಸಾಲದಲ್ಲಿ ಘಟಕ ವೆಚ್ಚದ ಶೇ.22.5 ರಷ್ಟು ಮೊತ್ತಕ್ಕೆ ಪೂರಕ ಭದ್ರತೆಯನ್ನು ಪಡೆಯುವ ಜೊತೆಗೆ ಸಾಲ ನೀಡಿದ ಸ್ಥಿರಾಸ್ತಿಯ ಮೇಲಿನ ಮೊದಲ ಹಕ್ಕನ್ನು ಹೊಂದಿರತಕ್ಕದ್ದು.

d) ಬ್ಯಾಂಕ್ / ಹಣಕಾಸು ಸಂಸ್ಥೆಯ ಸಾಲದ ಮೊತ್ತವು ಪೂರ್ಣ ಮರುಪಾವತಿಯಾಗುವವರೆಗೂ ಮಾತ್ರ ಘಟಕದ ಸ್ಥಿರಾಸ್ತಿಯ ಮೇಲೆ ಆರ್.ಬಿ.ಐ. ನಿಯಮಗಳನ್ವಯ ಕಾನೂನು ಪ್ರಕಾರ ವಸೂಲಾತಿ ಅಧಿಕಾರವನ್ನು ಹೊಂದಿರುತ್ತದೆ. ಘಟಕವು ಬ್ಯಾಂಕ್ / ಹಣಕಾಸು ಸಂಸ್ಥೆಯ ಸಾಲವನ್ನು ಪೂರ್ಣ ಮರುಪಾವತಿಸಿದ ನಂತರ ಇಲಾಖೆಯು ಘಟಕದ First Charge ಅನ್ನು ಪಡೆಯುವಂತೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

e) ಬ್ಯಾಂಕ್ / ಹಣಕಾಸು ಸಂಸ್ಥೆಯು ಸಾಲ ಮಂಜೂರಾತಿ ನೀಡಿದ ಘಟಕದ ಯೋಜನಾ ಮೌಲ್ಯಮಾಪನ ವರದಿಯೊಂದಿಗೆ (Appraisal Report) ಕೈಮಗ್ಗ ಮತ್ತು ಜವಳಿ ಇಲಾಖೆಗೆ ಸಹಾಯಧನ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

2. ಆ. ಹಣಕಾಸಿನ ನೆರವು:

ಕ್ರ. ಸಂ.	ಯೋಜನೆ	ಸರ್ಕಾರದ ಬಂಡವಾಳ ಸಹಾಯಧನ **Backend** ರೂಪದಲ್ಲಿ	ಬಡ್ಡಿ ಸಹಾಯಧನ		ಷರಾ
			ಹಣಕಾಸು ಸಂಸ್ಥೆಗಳಿಂದ ಶೇ.4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆದಿದ್ದಲ್ಲಿ	ಹಣಕಾಸು ಸಂಸ್ಥೆಗಳಿಂದ ಶೇ.4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆಯದಿದ್ದಲ್ಲಿ	
1	ಪರಿಶಿಷ್ಟ ಜಾತಿ ಉಪ ಯೋಜನೆ	ಶೇ.75 ರಷ್ಟು ಅಥವಾ ಗರಿಷ್ಠ ರೂ.2.00 ಕೋಟಿಗಳಿಗೆ ಮಿತಿಗೊಳಿಸುವುದು	ಇಲ್ಲ	ಗರಿಷ್ಠ ರೂ.75.00 ಲಕ್ಷಗಳ ಅವಧಿ ಸಾಲದ ಮೇಲೆ ಮೊದಲ 05 ವರ್ಷಗಳ ಅವಧಿಗೆ ಜವಳಿ ನೀತಿಯನ್ವಯ ಬಡ್ಡಿ ಸಹಾಯಧನ ನೀಡುವುದು	ಸರ್ಕಾರದ ಸಹಾಯಧನವನ್ನು ಯೋಜನೆಯ ಪ್ರಗತಿಯನ್ನು ಆಧರಿಸಿ ಅನುದಾನ ಲಭ್ಯತೆಯನುಸಾರವಾಗಿ Backend ರೂಪದಲ್ಲಿ ಬಿಡುಗಡೆ ಮಾಡಲಾಗುವುದು
2	ಗಿರಿಜನ ಉಪ ಯೋಜನೆ	ಶೇ.75 ರಷ್ಟು ಅಥವಾ ಗರಿಷ್ಠ ರೂ.2.00 ಕೋಟಿಗಳಿಗೆ ಮಿತಿಗೊಳಿಸುವುದು	ಇಲ್ಲ	ಗರಿಷ್ಠ ರೂ.75.00 ಲಕ್ಷಗಳ ಅವಧಿ ಸಾಲದ ಮೇಲೆ ಮೊದಲ 05 ವರ್ಷಗಳ ಅವಧಿಗೆ ಜವಳಿ ನೀತಿಯನ್ವಯ ಬಡ್ಡಿ ಸಹಾಯಧನ ನೀಡುವುದು	

a) ಸಣ್ಣ ಮತ್ತು ಅತಿ ಸಣ್ಣ(ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಹೆಚ್ಚಿನ ಉತ್ತೇಜನ ನೀಡುವ ಉದ್ದೇಶದಿಂದ ಯೋಜನಾ ಮೊತ್ತವನ್ನು ಕಟ್ಟಡ (Building), ಯಂತ್ರೋಪಕರಣ (Plant & Machineries), ಯಂತ್ರೋಪಕರಣಗಳ ಸ್ಥಾಪನೆ (Erection), ಅನುಸ್ಥಾಪನ (Installation), ಜನರೇಟರ್ ಹಾಗೂ ಪ್ರಾಥಮಿಕ ಹಾಗೂ ಪೂರ್ವ ಆಪರೇಟಿವ್ ವೆಚ್ಚ(Preliminary and Pre-Operative Expenses) ಗಳಿಗೆ ತಗಲುವ ಯೋಜನಾ (ಸ್ಥಿರಾಸ್ತಿಗಳ) ಮೊತ್ತದಲ್ಲಿ ರೂ.2.00 ಕೋಟಿಗಳ ಬಂಡವಾಳ ಹೂಡಿಕೆಯನ್ನು ಮಾತ್ರ ಈ ಯೋಜನೆಯಡಿ ಪರಿಗಣಿಸಲಾಗುವುದು. ಸರ್ಕಾರದ ಸಹಾಯಧನದ ಮೊತ್ತವನ್ನು ಯೋಜನಾ ವೆಚ್ಚದ ಶೇ.75 ರಷ್ಟು ಅಥವಾ ಗರಿಷ್ಠ ರೂ.2.00 ಕೋಟಿಗಳಿಗೆ ಸೀಮಿತಗೊಳಿಸಲಾಗಿರುತ್ತದೆ. ಹಣಕಾಸು ಸಂಸ್ಥೆಗಳಿಂದ ಶೇ.4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆದಿದ್ದಲ್ಲಿ, ಇಲಾಖೆಯು ಬಡ್ಡಿ ಸಹಾಯಧನ ನೀಡುವುದಿಲ್ಲ. ಆದರೆ ಹಣಕಾಸು ಸಂಸ್ಥೆಗಳಿಂದ ಶೇ.4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆಯದೇ ಇದ್ದಲ್ಲಿ, ಗರಿಷ್ಠ ರೂ.75.00 ಲಕ್ಷಗಳ ಅವಧಿ ಸಾಲದ ಮೇಲೆ ಮೊದಲ 05 ವರ್ಷಗಳ ಅವಧಿಗೆ ಜವಳಿ ನೀತಿಯನ್ವಯ ಬಡ್ಡಿ ಸಹಾಯಧನವನ್ನು ಇಲಾಖೆಯಿಂದ ನೀಡಲಾಗುವುದು.

b) ಸರ್ಕಾರದ ಸಹಾಯಧನವನ್ನು ಬಿಡುಗಡೆ ಮಾಡುವ ಮುನ್ನ ಇಲಾಖೆಯ ಹಾಗೂ ಬ್ಯಾಂಕ್ / ಹಣಕಾಸು ಸಂಸ್ಥೆಯ ಅಧಿಕಾರಿಗಳು ಜಂಟಿಯಾಗಿ ಭೌತಿಕ ಪರಿಶೀಲನೆ ನಡೆಸಿ ಘಟಕವು ಯೋಜನೆಯ ಮಾರ್ಗಸೂಚಿಯನ್ವಯ ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

c) ಸರ್ಕಾರದ ಸಹಾಯಧನವನ್ನು ಅನುದಾನ ಲಭ್ಯತೆಯನುಸಾರವಾಗಿ ಬ್ಯಾಂಕ್ / ಹಣಕಾಸು ಸಂಸ್ಥೆಗೆ ಯೋಜನೆಯ ಅನುಷ್ಠಾನದ ಪ್ರಗತಿಯನ್ನಾಧರಿಸಿ Backend ರೂಪದಲ್ಲಿ ಬಿಡುಗಡೆ ಮಾಡಲಾಗುವುದು.

d) 2020-21ನೇ ಸಾಲಿನಿಂದ ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಘಟಕಗಳಿಗೆ ನೀಡಲಾದ ಸಹಾಯಧನದ ಮೊತ್ತಕ್ಕೆ ವ್ಯತ್ಯಾಸದ ಅರ್ಹ ಸಹಾಯಧನದ ಮೊತ್ತವನ್ನು ನೀಡಲಾಗುವುದು.

e) ಯೋಜನೆ ಅನುಷ್ಠಾನಕ್ಕೆ ಅವಶ್ಯವಿರುವ ದುಡಿಮೆ ಬಂಡವಾಳವನ್ನು ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ / ಜವಳಿ ಸಹಕಾರ ಸಂಘ / ಸಂಸ್ಥೆಯವರೇ ಸ್ವತಃ ಭರಿಸತಕ್ಕದ್ದು ಅಥವಾ ಬ್ಯಾಂಕುಗಳಿಂದ/ ಹಣಕಾಸು ಸಂಸ್ಥೆಗಳಿಂದ ಪಡೆದುಕೊಳ್ಳತಕ್ಕದ್ದು.

f) ಬ್ಯಾಂಕ್ / ಹಣಕಾಸು ಸಂಸ್ಥೆಗಳು ಸಾಲಕ್ಕೆ ವಿಧಿಸುವ ಬಡ್ಡಿದರಕ್ಕೆ ಅನುಗುಣವಾಗಿ ಬಡ್ಡಿ ಸಹಾಯಧನವನ್ನು ಫಲಾನುಭವಿಗಳು ಇಲಾಖೆಯಿಂದ ಹಿಂಪಡೆಯುವುದು. ಇದರ ಬಗ್ಗೆ ಆಯಾ ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದ ಅವಧಿಯ ಬಡ್ಡಿ ಪಾವತಿ ದೃಢೀಕರಣ ತಃಖ್ತೆಯನ್ನು ಸಲ್ಲಿಸತಕ್ಕದ್ದು.

3. <u>ಸರ್ಕಾರದ ಬಂಡವಾಳ ಸಹಾಯಧನ:</u>

a) ಸರ್ಕಾರದ ಬಂಡವಾಳ ಸಹಾಯಧನವನ್ನು ಯೋಜನೆಯ ಕಟ್ಟಡ (Building), ಯಂತ್ರೋಪಕರಣ (Plant & Machineries), ಯಂತ್ರೋಪಕರಣಗಳ ಸ್ಥಾಪನೆ (Erection), ಅನುಸ್ಥಾಪನ (Installation), ಜನರೇಟರ್ ಮತ್ತು ಪ್ರಾಥಮಿಕ ಹಾಗೂ ಪೂರ್ವ ಆಪರೇಟಿವ್ ವೆಚ್ಚಗಳ (Preliminary and Pre-Operative Expenses) (ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ ಅಡಿ ಸ್ಥಿರಾಸ್ತಿಗಳಿಗೆ ಪರಿಗಣಿಸುವಂತೆ) ಹಾಗೂ ದುಡಿಮೆಯ ಬಂಡವಾಳಕ್ಕೆ ಮಾತ್ರ ಪರಿಗಣಿಸಲಾಗುವುದು ಸರ್ಕಾರದಿಂದ ನೀಡುವ ಬಂಡವಾಳ ಸಹಾಯಧನ ಗರಿಷ್ಠ ರೂ.200.00 ಲಕ್ಷಗಳ ಶೇಕಡಾವಾರು ಹಂಚಿಕೆಯ ವಿವರಗಳನ್ನು ಈ ಕೆಳಗಿನಂತೆ ಪರಿಗಣಿಸತಕ್ಕದ್ದು.

ವೆಚ್ಚದ ವಿವರಗಳು	ಅರ್ಹ ಸಹಾಯಧನ
ಭೂಮಿ	-
ಘಟಕದ ಸಿವಿಲ್ ಕಾಮಗಾರಿಗಳು	ಶೇ.30 ರಷ್ಟು ಅಥವಾ ಗರಿಷ್ಠ ರೂ.60.00 ಲಕ್ಷಗಳು
ಯಂತ್ರೋಪಕರಣಗಳು (Machineries), ಯಂತ್ರೋಪಕರಣಗಳ ಸ್ಥಾಪನೆ (Erection), ವಿದ್ಯುದ್ದೀಕರಣ (Energization), ಅನುಸ್ಥಾಪನ (Installation), ಜನರೇಟರ್(Generator) , ಪ್ರಾಥಮಿಕ ಹಾಗೂ ಪೂರ್ವ ಆಪರೇಟಿವ್ ವೆಚ್ಚಗಳು (Preliminary and Pre-Operative Expenses) ಹಾಗೂ ದುಡಿಯುವ ಬಂಡವಾಳ (ಶೇ.5 ರಷ್ಟು ಅಥವಾ ಗರಿಷ್ಠ ರೂ.10.00 ಲಕ್ಷಗಳು)	ಶೇ.70 ರಷ್ಟು ಅಥವಾ ಗರಿಷ್ಠ ರೂ.140.00 ಲಕ್ಷಗಳು
ಒಟ್ಟು	**ಶೇ.100 ರಷ್ಟು ಅಂದರೆ ರೂ.200.00 ಲಕ್ಷಗಳು**

b) ಸದರಿ ಯೋಜನೆಯಡಿ ಸಿದ್ದ ಉಡುಪು ತಯಾರಿಕಾ ಘಟಕದ ಯೋಜನೆಗಳಿಗೆ ಕಟ್ಟಡವನ್ನು ನಿರ್ಮಿಸಲು ಗರಿಷ್ಠ ಸಹಾಯಧನ ರೂ.200.00 ಲಕ್ಷಗಳಲ್ಲಿ ಶೇ.40 ರಷ್ಟು ಅಂದರೆ, ರೂ.80.00 ಲಕ್ಷಗಳನ್ನು ಹಾಗೂ ಯಂತ್ರೋಪಕರಣಗಳು(Machineries), ಯಂತ್ರೋಪಕರಣಗಳ ಸ್ಥಾಪನೆ (Erection), ವಿದ್ಯುದ್ದೀಕರಣ (Energization), ಅನುಸ್ಥಾಪನ (Installation), ಜನರೇಟರ್ (Generator) ಹಾಗೂ ಪ್ರಾಥಮಿಕ ಹಾಗೂ ಪೂರ್ವ ಆಪರೇಟಿವ್ ವೆಚ್ಚ (Preliminary and Pre-Operative Expenses) ಗಳಿಗೆ, ಶೇ.55 ರಷ್ಟು ಅಥವಾ ಗರಿಷ್ಠ ರೂ.110.00 ಲಕ್ಷಗಳು ಹಾಗೂ ದುಡಿಮೆ ಬಂಡವಾಳಕ್ಕಾಗಿ ಶೇ.5 ರಷ್ಟು ಅಂದರೆ ರೂ.10.00 ಲಕ್ಷಗಳನ್ನು ನೀಡಲು ಪರಿಗಣಿಸತಕ್ಕದ್ದು.

c) 2017-18 ರಿಂದ 2019-20ನೇ ಸಾಲಿನವರೆಗೆ ನೇಕಾರರ ಪ್ಯಾಕೇಜ್ – ವಿಶೇಷ ಘಟಕ ಹಾಗೂ ಗಿರಿಜನ ಉಪ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸಹಾಯಧನ ಒದಗಿಸಲು ಹಿಂದಿನ 02 ಮಾರ್ಗಸೂಚಿಗಳನ್ವಯ ಅನುಮೋದನೆಯಾಗಿರುವ 110 ಎಸ್.ಸಿ.ಪಿ. ಹಾಗೂ 62 ಟಿ.ಎಸ್.ಪಿ. **ಎಸ್.ಎಂ.ಇ. ಘಟಕಗಳ ಯೋಜನಾ ವೆಚ್ಚದಲ್ಲಿ ಪರಿಷ್ಕರಣೆ ಪ್ರಸ್ತಾವನೆಗಳಿದ್ದಲ್ಲಿ**, ಪ್ರಸ್ತುತ ಈ ಕೆಳಗಿನಂತೆ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಸರ್ಕಾರದ ಸಹಾಯಧನದ ಅನುಪಾತದನುಸಾರ ಸಹಾಯಧನವನ್ನು ಪರಿಷ್ಕರಿಸಲು ಜವಳಿ ಅಭಿವೃದ್ಧಿ ಆಯುಕ್ತರು ತಮ್ಮ ಸ್ಪಷ್ಟ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

ವೆಚ್ಚದ ವಿವರಗಳು	ಅರ್ಹ ಸಹಾಯಧನ
ಭೂಮಿ	-
ಘಟಕದ ಸಿವಿಲ್ ಕಾಮಗಾರಿಗಳು	ಶೇ.30 ರಷ್ಟು ಅಥವಾ ಗರಿಷ್ಟ ರೂ.150.00 ಲಕ್ಷಗಳು(ಸಿದ್ಧ ಉಡುಪು ಘಟಕಕ್ಕೆ ಶೇ.40 ರಷ್ಟು ಅಥವಾ ಗರಿಷ್ಠ ರೂ.200.00 ಲಕ್ಷಗಳು)
ಯಂತ್ರೋಪಕರಣಗಳು (Machineries), ಯಂತ್ರೋಪಕರಣಗಳ ಸ್ಥಾಪನೆ (Erection), ವಿದ್ಯುದ್ದೀಕರಣ (Energization), ಅನುಸ್ಥಾಪನ (Installation), ಜನರೇಟರ್(Generator) , ಪ್ರಾಥಮಿಕ ಹಾಗೂ ಪೂರ್ವ ಆಪರೇಟಿವ್ ವೆಚ್ಚಗಳು (Preliminary and Pre-Operative Expenses)	ಶೇ.60 ರಷ್ಟು ಅಥವಾ ಗರಿಷ್ಟ ರೂ.300.00 ಲಕ್ಷಗಳು(ಸಿದ್ಧ ಉಡುಪು ಘಟಕಕ್ಕೆ ಶೇ.50 ರಷ್ಟು ಅಥವಾ ಗರಿಷ್ಠ ರೂ.250.00 ಲಕ್ಷಗಳು)
ಒಟ್ಟು	**ಶೇ.90 ರಷ್ಟು ಅಂದರೆ ರೂ.450.00 ಲಕ್ಷಗಳು**

d) ಈ ಯೋಜನೆಯಡಿ ಮಂಜೂರಾದ ಘಟಕಗಳು ಕೇಂದ್ರ ಸರ್ಕಾರದ Amended Technology Upgradation Fund Scheme (ATUFS) ಯೋಜನೆ ಹಾಗೂ ಇತರೆ ಯೋಜನೆಗಳ ಅಡಿಯಲ್ಲಿ ಎಸ್.ಎಂ.ಇ. ಘಟಕಗಳಿಗೆ ಲಭ್ಯವಿರುವ ಸೌಲಭ್ಯಗಳನ್ನು ಪಡೆದುಕೊಳ್ಳಬಹುದಾಗಿದೆ.

e) ಯೋಜನೆಯ ಅನುಷ್ಠಾನಕ್ಕೆ ಬ್ಯಾಂಕಿನಿಂದ/ ಹಣಕಾಸು ಸಂಸ್ಥೆಯಿಂದ ಅಂತಿಮ ಸಾಲ ಮಂಜೂರಾತಿ ಪತ್ರದೊಂದಿಗೆ ಅವಶ್ಯ ದಾಖಲಾತಿಗಳನ್ನು ಸಲ್ಲಿಸಿದ ನಂತರ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ/ ಜವಳಿ ಸಹಕಾರ ಸಂಘ / ಸಂಸ್ಥೆಗೆ ಯೋಜನೆ ಅನುಷ್ಠಾನಕ್ಕೆ ಇಲಾಖೆಯಿಂದ ಮಂಜೂರಾತಿ ನೀಡಲಾಗುವುದು.

4. <u>ಸಹಾಯಧನ ಬಿಡುಗಡೆ ವಿಧಾನ:</u>

a) ಸರ್ಕಾರದ ಸಹಾಯಧನವನ್ನು ಪಡೆಯಲು ಯೋಜನೆಯ ಅನುಷ್ಠಾನಕ್ಕೆ ಅನುಮೋದನೆಯಾದ ಘಟಕಗಳಿಂದ ಸಾಲ ಮತ್ತು ಸ್ವಂತ ಬಂಡವಾಳ ಹೂಡಿದ ನಂತರ ಸಲ್ಲಿಸಲಾದ ಕ್ಲೈಮ್ಸ್ ಗಳಿಗೆ ಪ್ರೋರೇಟಾ ಆಧಾರದ ಮೇಲೆ ಗರಿಷ್ಠ 4 ಹಂತಗಳಲ್ಲಿ ಸಾಲ ನೀಡಿದ ಬ್ಯಾಂಕಿಗೆ / ಹಣಕಾಸು ಸಂಸ್ಥೆಗೆ ಅನುದಾನದ ಲಭ್ಯತೆಗೆ ಒಳಪಟ್ಟು ಸಹಾಯಧನ ಬಿಡುಗಡೆ ಮಾಡಲಾಗುವುದು.

b) ಬ್ಯಾಂಕ್ / ಹಣಕಾಸು ಸಂಸ್ಥೆಯು ಉದ್ದೇಶಿತ ಘಟಕದ ಸ್ಥಿರಾಸ್ತಿಯ ಶೇ.90 ರಷ್ಟು ಅವಧಿ ಸಾಲವನ್ನು ಮಂಜೂರು ಮಾಡಬಹುದಾಗಿದ್ದು ಮತ್ತು ಫಲಾನುಭವಿಯ ವಂತಿಕೆ ಅನುಪಾತಕ್ಕೆ ಅನುಗುಣವಾಗಿ ಯೋಜನೆಯ ಅನುಷ್ಠಾನಕ್ಕೆ ಸಾಲದ ಮೊತ್ತವನ್ನು ಬಿಡುಗಡೆ ಮಾಡುವುದು. ಆನಂತರ ಯೋಜನೆಯ ಪ್ರಗತಿಗನುಸಾರವಾಗಿ ಸರ್ಕಾರದ ಸಹಾಯಧನವನ್ನು ಬ್ಯಾಂಕ್ / ಹಣಕಾಸು ಸಂಸ್ಥೆಗೆ ಕಂತುಗಳ ಮೂಲಕ ಬಿಡುಗಡೆ ಮಾಡಲಾಗುವುದು.

c) ಈ ಯೋಜನೆಯಡಿ ಬಿಡುಗಡೆ ಮಾಡಲಾಗುವ ಸಹಾಯಧನವನ್ನು ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ ಯೋಜನೆಯಡಿ ಜವಳಿ ಪಾರ್ಕ್ ಗಳಿಗೆ ಯೋಜನೆಯ ಅನುಷ್ಠಾನಕ್ಕೆ ಸಹಾಯಧನ ಬಿಡುಗಡೆ ಮಾಡುವ ರೀತಿಯಲ್ಲಿ ಶೇ.75 ರ ಬಂಡವಾಳ ಸಹಾಯಧನ ಗರಿಷ್ಠ ರೂ.2.00 ಕೋಟಿಗಳ ಮೊತ್ತವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲಾಗುವುದು.

1ನೇ ಕಂತು: ಗರಿಷ್ಠ ಶೇ.30 ರಷ್ಟು – ಅನುಮೋದನೆ ನೀಡಿದ ಘಟಕಗಳು ಯೋಜನೆಯನ್ನು ಅನುಷ್ಠಾನಗೊಳಿಸಿ ಸಾಲ ಮತ್ತು ಸ್ವಂತ ಬಂಡವಾಳ ಹೂಡಿದ ನಂತರ ಸಲ್ಲಿಸಲಾದ ಕ್ಲೈಮ್ಸ್ ಗಳಿಗೆ ಪ್ರೋರೇಟಾ ಆಧಾರದ ಮೇಲೆ ಸಾಲ ನೀಡಿದ ಬ್ಯಾಂಕ್ / ಹಣಕಾಸು ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು(ಶೇ.22.50).

2ನೇ ಕಂತು: ಗರಿಷ್ಠ ಶೇ.30 ರಷ್ಟು – ಮೊದಲನೇ ಕಂತಿನ ಸಹಾಯಧನ ಪಡೆದ ಘಟಕಗಳು ಯೋಜನೆಯನ್ನು ಅನುಷ್ಠಾನಗೊಳಿಸಿ ಸಾಲ ಮತ್ತು ಸ್ವಂತ ಬಂಡವಾಳ ಹೂಡಿದ ನಂತರ ಸಲ್ಲಿಸಲಾದ ಕ್ಲೈಮ್ಸ್ ಗಳಿಗೆ ಪ್ರೋರೇಟಾ ಆಧಾರದ ಮೇಲೆ ಸಾಲ ನೀಡಿದ ಬ್ಯಾಂಕ್ / ಹಣಕಾಸು ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು(ಶೇ.22.50).

3ನೇ ಕಂತು: ಗರಿಷ್ಠ ಶೇ.30 ರಷ್ಟು – ಎರಡನೇ ಕಂತಿನ ಸಹಾಯಧನ ಪಡೆದ ಘಟಕಗಳು ಯೋಜನೆಯನ್ನು ಅನುಷ್ಠಾನಗೊಳಿಸಿ ಸಾಲ ಮತ್ತು ಸ್ವಂತ ಬಂಡವಾಳ ಹೂಡಿದ ನಂತರ ಸಲ್ಲಿಸಲಾದ ಕ್ಲೈಮ್ಸ್ ಗಳಿಗೆ ಪ್ರೋರೇಟಾ ಆಧಾರದ ಮೇಲೆ ಸಾಲ ನೀಡಿದ ಬ್ಯಾಂಕ್ / ಹಣಕಾಸು ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು(ಶೇ.22.50).

4ನೇ ಕಂತು: ಗರಿಷ್ಠ ಶೇ.10 ರಷ್ಟು - ಮೂರನೇ ಕಂತಿನ ಸಹಾಯಧನ ಪಡೆದ ಘಟಕಗಳು ಯೋಜನೆಯನ್ನು ಅನುಷ್ಠಾನಗೊಳಿಸಿ ಸಾಲ ಮತ್ತು ಸ್ವಂತ ಬಂಡವಾಳ ಹೂಡಿದ ನಂತರ ಸಲ್ಲಿಸಲಾದ ಕ್ಲೈಮ್ಸ್ ಗಳಿಗೆ ಪ್ರೋರೇಟಾ ಆಧಾರದ ಮೇಲೆ ಸಾಲ ನೀಡಿದ ಬ್ಯಾಂಕ್ / ಹಣಕಾಸು ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು(ಶೇ.7.50).

5. ಬಡ್ಡಿ ಸಹಾಯಧನ: ಈ ಮೊತ್ತವನ್ನು ಘಟಕದ ಸ್ಥಾಪನೆ ಹಾಗೂ ಉತ್ಪಾದನೆ ಪ್ರಾರಂಭಿಸಿದ ನಂತರ ಫಲಾನುಭವಿಯು ಬ್ಯಾಂಕಿಗೆ ಪಾವತಿಸಿದ ಬಡ್ಡಿ ಮೊತ್ತದ ಅನುಗುಣವಾಗಿ ಪ್ರಸ್ತಾವನೆ ಸಲ್ಲಿಸಿದ ನಂತರ ಘಟಕದವರು ಪಡೆದ, ಗರಿಷ್ಠ ರೂ.75.00 ಲಕ್ಷಗಳ ಅವಧಿ ಸಾಲದ ಮೇಲೆ ಮೊದಲ 05 ವರ್ಷಗಳ ಅವಧಿಗೆ ಜವಳಿ ನೀತಿಯನ್ವಯ ಬಡ್ಡಿ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು. ಈ ಬಗ್ಗೆ ಸಂಬಂಧಪಟ್ಟ ಬ್ಯಾಂಕ್ / ಹಣಕಾಸು ಸಂಸ್ಥೆಯಿಂದ ದೃಢೀಕರಣ ತಃಖ್ತೆಯನ್ನು ಸಲ್ಲಿಸತಕ್ಕದ್ದು. **(ಹಣಕಾಸು ಸಂಸ್ಥೆಗಳಿಂದ ಶೇ.4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆಯದೇ ಇರುವ ಘಟಕಗಳಿಗೆ ಮಾತ್ರ).**

6. ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ /ಜವಳಿ ಸಹಕಾರ ಸಂಘದ/ ಸಂಸ್ಥೆಯ ಪಾತ್ರ:

a) ಯೋಜನೆಯ ಅನುಷ್ಠಾನದ ಸಂಪೂರ್ಣ ಜವಾಬ್ದಾರಿ ಹಾಗೂ ನಿರ್ವಹಣೆ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ/ ಕಂಪನಿ / ಜವಳಿ ಸಹಕಾರ ಸಂಘ/ ಸಂಸ್ಥೆಗೆ ಅನ್ವಯಿಸುವುದು.

b) ಯೋಜನೆಯ ಅನುಷ್ಠಾನಕ್ಕೆ ಬೇಕಾದ ಭೂಮಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ವೈಯಕ್ತಿಕ ಫಲಾನುಭವಿಗಳು / ಪಾಲುದಾರಿಕೆ ಸಂಸ್ಥೆ / ಕಂಪನಿ/ ಜವಳಿ ಸಹಕಾರ ಸಂಘ / ಸಂಸ್ಥೆಯವರು ಹೊಂದಿರತಕ್ಕದ್ದು.

c) ಯೋಜನೆಗೆ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಪೂರ್ವಾನುಮತಿ ಪಡೆಯತಕ್ಕದ್ದು.

7. ದಾಖಲಾತಿಗಳು:

a) **ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ/ ಕಂಪನಿ/ ಜವಳಿ ಸಹಕಾರ ಸಂಘ/ ಸಂಸ್ಥೆಯವರು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ಸಾಮಾನ್ಯ ದಾಖಲಾತಿಗಳು:**

1. ಬ್ಯಾಂಕಿನಿಂದ ಯೋಜನೆಗೆ ನೀಡಲಾಗುವ ಅಂತಿಮ ಸಾಲ ಮಂಜೂರಾತಿ ಪತ್ರ.
2. ವಿವರವಾದ ಯೋಜನಾ ವರದಿ(ಡಿ.ಪಿ.ಆರ್).
3. ಖಾಲಿ ನಿವೇಶನ ದಾಖಲಾತಿಗಳು & ಆರ್.ಟಿ.ಸಿ. ಪ್ರತಿ / ಕೆ.ಐ.ಎ.ಡಿ.ಬಿ. / ಕೆ.ಎಸ್.ಎಸ್.ಐ.ಡಿ.ಸಿ. ನಿಗಮಗಳಿಂದ ನಿವೇಶನ ಸ್ವಾಧೀನ ಪತ್ರ ಹಾಗೂ ನೊಂದಾಯಿತ ಲೀಸ್ ಕಮ್ ಸೇಲ್ ಅಗ್ರಿಮೆಂಟ್.
4. ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಕಟ್ಟಡದ ನಕ್ಷೆ ಮತ್ತು ಕಟ್ಟಡದ ಅಂದಾಜು ಪಟ್ಟಿ.
5. ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಮೊತ್ತವನ್ನು ಭರಿಸುವ ಬಗ್ಗೆ ಮುಚ್ಚಳಿಕೆ ಪತ್ರ.
6. ಯೋಜನೆಯ ಅನುಷ್ಠಾನಕ್ಕೆ ಅವಶ್ಯವಿರುವ ಇನ್ನಿತರೆ ದಾಖಲಾತಿಗಳು.

b) **ಜವಳಿ ಸಹಕಾರ ಸಂಘ/ ಸಂಸ್ಥೆಯವರು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:**

1. ಜವಳಿ ಸಹಕಾರ ಸಂಘ / ಸಂಸ್ಥೆಯ ಬಯೋ ಡೇಟಾ.
2. ಜವಳಿ ಸಹಕಾರ ಸಂಘ / ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ಪ್ರತಿ.
3. ಜವಳಿ ಸಹಕಾರ ಸಂಘ / ಸಂಸ್ಥೆಯ ಬೈಲಾ ಪ್ರತಿ.
4. ಜವಳಿ ಸಹಕಾರ ಸಂಘ / ಸಂಸ್ಥೆಯ ಆಡಳಿತ ಮಂಡಳಿಯ ಠರಾವು ಪ್ರತಿ.
5. ಜವಳಿ ಸಹಕಾರ ಸಂಘ / ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರ ಪಟ್ಟಿ.
6. ಜವಳಿ ಸಹಕಾರ ಸಂಘ / ಸಂಸ್ಥೆಯಲ್ಲಿ ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರುವ ಬಗ್ಗೆ ದೃಢೀಕರಣ ಪತ್ರ.
7. ಕಳೆದ ಮೂರು ವರ್ಷಗಳ ಆಡಿಟ್ ವರದಿ.

c) **ಕಂಪನಿ / ಪಾಲುದಾರಿಕೆ ಸಂಸ್ಥೆಯವರು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:**

1. ಕಂಪನಿ / ಪಾಲುದಾರಿಕೆ ಸಂಸ್ಥೆಯವರ ಬಯೋ ಡೇಟಾ.
2. ಕಂಪನಿ / ಪಾಲುದಾರಿಕೆ ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ಪ್ರತಿ.
3. ಕಂಪನಿ / ಪಾಲುದಾರಿಕೆ ಸಂಸ್ಥೆಯ Memorandum and Article of Association ಪ್ರತಿ.
4. ಕಂಪನಿ / ಪಾಲುದಾರಿಕೆ ಸಂಸ್ಥೆಯ ಆಡಳಿತ ಮಂಡಳಿಯ ಠರಾವು ಪ್ರತಿ.
5. ಕಂಪನಿ / ಪಾಲುದಾರಿಕೆ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರ ಪಟ್ಟಿ.
6. ಕಂಪನಿ / ಪಾಲುದಾರಿಕೆ ಸಂಸ್ಥೆಯಲ್ಲಿ ಶೇ.100 ರಷ್ಟು ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರುವ ಬಗ್ಗೆ ದೃಢೀಕರಣ ಪತ್ರ.

d) **ವೈಯಕ್ತಿಕ ಫಲಾನುಭವಿಗಳು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು**:

1. ಫಲಾನುಭವಿ ಬಯೋ ಡೇಟಾ.
2. ಇತ್ತೀಚಿನ ಭಾವ ಚಿತ್ರ ಮತ್ತು ಆಧಾರ್ ಕಾರ್ಡ್ ಪ್ರತಿ.
3. ಜಾತಿ ಪ್ರಮಾಣ ಪತ್ರ.
4. ವಿವರವಾದ ಯೋಜನಾ ವರದಿ (ಡಿ.ಪಿ.ಆರ್.)
5. ಜವಳಿ ವಲಯದಲ್ಲಿ ಅನುಭವವುಳ್ಳ ಫಲಾನುಭವಿಗಳಿಗೆ ಆದ್ಯತೆಯನ್ನು ನೀಡುವುದು.

8. ಷರತ್ತು ಮತ್ತು ನಿಬಂಧನೆಗಳು

a) ಯೋಜನೆಯ ಪ್ರಸ್ತಾವನೆಯನ್ನು ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ ಸಭೆ ಯಲ್ಲಿ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಹಾಗೂ ಕರ್ನಾಟಕ ಅನುಸೂಚಿತ ಜಾತಿ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ)

ಅಧಿನಿಯಮ-2013ರ ಕಾಯ್ದೆ ಅನ್ವಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಾಜ ಕಲ್ಯಾಣ ಇಲಾಖೆ ಸಮಿತಿಗೆ ಪ್ರಗತಿ ವರದಿ ಮಂಡಿಸತಕ್ಕದ್ದು.

b) ಈ ಯೋಜನೆಯಡಿ ಪ್ರಸ್ತಾವನೆಗಳಿಗೆ ನೀಡುವ ಅನುಮೋದನೆಯು ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಮಿತಿಯನ್ನು ಮೀರತಕ್ಕದ್ದಲ್ಲ ಮತ್ತು ಅನುದಾನದ ನಿರೀಕ್ಷಣೆಯಲ್ಲಿ ಯಾವುದೇ ಅನುಮೋದನೆಯನ್ನು ನೀಡತಕ್ಕದ್ದಲ್ಲ.

c) ಸರ್ಕಾರದ ಮೊದಲನೇ ವಂತಿಕೆ ಬಿಡುಗಡೆಯಾದ 18 ತಿಂಗಳ ಅವಧಿಯಲ್ಲಿ ಫಲಾನುಭವಿ/ ಜವಳಿ ಸಹಕಾರ ಸಂಘ / ಸಂಸ್ಥೆಯವರು ಯೋಜನೆಯನ್ನು ಪೂರ್ಣಗೊಳಿಸತಕ್ಕದ್ದು.

d) ಅನುಷ್ಠಾನಕ್ಕೆ ಅವಶ್ಯವಿರುವ ವಿವಿಧ ಇಲಾಖೆ/ ಸಕ್ಷಮ ಪ್ರಾಧಿಕಾರಗಳ ಅನುಮತಿಗಳನ್ನು ಪಡೆಯತಕ್ಕದ್ದು.

e) ಕಟ್ಟಡ ಕಾಮಗಾರಿಗಳಿಗೆ ಸ್ಥಳೀಯ ಸಂಸ್ಥೆಗಳಿಂದ ನಿಗದಿತ ಅನುಮೋದನೆ ಪಡೆಯತಕ್ಕದ್ದು.

f) ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರದಿಂದ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಗಳಿಗೆ ಬಳಸತಕ್ಕದ್ದು.

g) ಯೋಜನಾ ಅನುಷ್ಠಾನದಲ್ಲಿ ಬದಲಾವಣೆಗಳಿದ್ದಲ್ಲಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಜವಳಿ)ಯಿಂದ ಪೂರ್ವಾನುಮತಿ ಪಡೆದು ಅನುಷ್ಠಾನಗೊಳಿಸತಕ್ಕದ್ದು.

h) ಕೈಮಗ್ಗ ಮತ್ತು ಜವಳಿ ಇಲಾಖೆ, ಬ್ಯಾಂಕ್/ ಹಣಕಾಸು ಸಂಸ್ಥೆ ಹಾಗೂ ಫಲಾನುಭವಿ ಸೇರಿ ಮಾರ್ಗಸೂಚಿಯ ಷರತ್ತು ಮತ್ತು ನಿಬಂಧನೆಗಳನ್ನೊಳಗೊಂಡಂತೆ ತ್ರಿಪಕ್ಷೀಯ ಒಪ್ಪಂದ ಮಾಡಿಕೊಳ್ಳತಕ್ಕದ್ದು. ಬ್ಯಾಂಕ್ / ಹಣಕಾಸು ಸಂಸ್ಥೆಯು ಘಟಕದ ಪ್ರಗತಿಯ ಕುರಿತು ಮೇಲ್ವಿಚಾರಣೆಯನ್ನು ಕಡ್ಡಾಯವಾಗಿ ನಡೆಸತಕ್ಕದ್ದು.

i) ಒಂದು ವೇಳೆ ಘಟಕವು ನಿಷ್ಕ್ರಿಯಗೊಂಡಲ್ಲಿ ಘಟಕದ ಆಸ್ತಿಯನ್ನು ಬ್ಯಾಂಕ್/ ಹಣಕಾಸು ಸಂಸ್ಥೆಯ ವಶಕ್ಕೆ ಪಡೆದು, ಅದನ್ನು ಮಾರಾಟ ಮಾಡಿ ಬಂದಂತಹ ಹಣವನ್ನು ವಿತರಿಸಲಾದ (ಬಾಕಿಯಿರುವ) ಸಾಲದ ಮೊತ್ತಕ್ಕೆ ಜಮೆ ಮಾಡಿಕೊಂಡು, ಹೆಚ್ಚುವರಿಯಾಗಿ ಉಳಿದಂತಹ ಮೊತ್ತವನ್ನು ಸರ್ಕಾರದಿಂದ ನೀಡಲಾದ ಅನುದಾನಕ್ಕೆ ಜಮೆ ಮಾಡತಕ್ಕದ್ದು.

j) ಯೋಜನಾ ಅನುಷ್ಠಾನದ ಪ್ರತಿ ಹಂತದ ಆರ್ಥಿಕ ಹಾಗೂ ಭೌತಿಕ ಪ್ರಗತಿಯನ್ನು ಇಲಾಖಾ ಅಧಿಕಾರಿಗಳು ಪರಿಶೀಲಿಸುವುದು.

k) ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಗತಿಯನ್ನು ಪರಿಗಣಿಸಿ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ/ ಜವಳಿ ಸಹಕಾರ ಸಂಘ/ ಸಂಸ್ಥೆಯ ಹಣ ಹಾಗೂ ಸರ್ಕಾರದ ಅನುದಾನವನ್ನು ಪ್ರೋರೇಟಾ ಆಧಾರದ ಮೇಲೆ ಹಂತ ಹಂತವಾಗಿ ಬಿಡುಗಡೆ ಮಾಡುವುದು.

l) ಸದರಿ ಘಟಕವನ್ನು ಸರ್ಕಾರದ ಪೂರ್ವಾನುಮತಿ ಪಡೆಯದೆ ಮಾರಾಟ ಅಥವಾ ಪರಭಾರೆಯನ್ನು ಮಾಡತಕ್ಕದ್ದಲ್ಲ.

m) ಸರ್ಕಾರದ ಮೊದಲನೇ ವಂತಿಕೆ ಬಿಡುಗಡೆಯಾದ 18 ತಿಂಗಳ ಅವಧಿಯೊಳಗೆ ಈ ಯೋಜನೆ ಅಡಿ ಮಂಜೂರಾದ ಘಟಕವು ಕಾರ್ಯೋನ್ಮುಖವಾಗತಕ್ಕದ್ದು. ತಪ್ಪಿದಲ್ಲಿ ಸರ್ಕಾರದ ಮಂಜೂರಾತಿ ಆದೇಶವನ್ನು ಪುನರ್ ಪರಿಶೀಲಿಸಲಾಗುವುದು ಅಥವಾ ರದ್ದುಪಡಿಸಲಾಗುವುದು.

n) ಈ ಯೋಜನೆಯಡಿ ಮಂಜೂರಾದ ಘಟಕವು ಕನಿಷ್ಠ 10 ವರ್ಷಗಳ ಕಾಲ ನಿರಂತರವಾಗಿ ಚಾಲನೆಯಲ್ಲಿರತಕ್ಕದ್ದು. ಒಂದು ವೇಳೆ ಘಟಕವು ಒಂದು ವರ್ಷದವರೆಗೆ ಸ್ಥಗಿತಗೊಂಡಲ್ಲಿ, ಇಲಾಖೆಯಿಂದ ಬಿಡುಗಡೆಯಾದ ಪೂರ್ಣ ಅನುದಾನವನ್ನು ಸರ್ಕಾರಕ್ಕೆ ಮರುಪಾವತಿಸತಕ್ಕದ್ದು. ತಪ್ಪಿದಲ್ಲಿ ಚಾಲ್ತಿಯಲ್ಲಿರುವ ಕಾಯ್ದೆಯಡಿ ವಸೂಲಾತಿಗೆ ಕ್ರಮವಹಿಸಲಾಗುವುದು. ಈ ಬಗ್ಗೆ ಇಲಾಖೆಯ ಹಾಗೂ ಹಣಕಾಸು ಸಂಸ್ಥೆ/ ಬ್ಯಾಂಕಿನ ಅಧಿಕಾರಿಗಳು ಜಂಟಿಯಾಗಿ ಪರಿಶೀಲನೆ ನಡೆಸಿ ವಾರ್ಷಿಕ ವರದಿ ಸಲ್ಲಿಸುವುದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

o) ನೇಕಾರರ ಪ್ಯಾಕೇಜ್ – ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ವಾಕೈ 44 ಜಕೈಯೋ 2017, ದಿನಾಂಕ:24.11.2018ರನ್ವಯ ಈಗಾಗಲೇ ಅನುಮೋದನೆ ಗೊಂಡಿರುವ 172 ಎಸ್.ಎಂ.ಇ. ಜವಳಿ ಘಟಕಗಳಿಗೆ ಅವುಗಳ ಜೇಷ್ಠತೆ, ಪ್ರಗತಿಯ ವಿಸ್ತರಣೆ ಮತ್ತು ಉದ್ಯೋಗ ಸೃಷ್ಟಿಯ ಆಧಾರದ ಮೇಲೆ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಶೇ.50 ರಷ್ಟನ್ನು ಬಳಸಿಕೊಳ್ಳತಕ್ಕದ್ದು. ಉಳಿದ ಶೇ.50 ರಷ್ಟನ್ನು ಇಲಾಖೆಯಲ್ಲಿ ಅನುಮೋದನೆಗೆ ಬಾಕಿಯಿರುವ 90 ಪ್ರಸ್ತಾವನೆಗಳಿಗೆ ಬಳಸಿಕೊಳ್ಳತಕ್ಕದ್ದು.

p) ಸದರಿ ಯೋಜನೆಯನ್ನು ಕುಟುಂಬದಲ್ಲಿನ ಒಬ್ಬ ಸದಸ್ಯರಿಗೆ ಮಾತ್ರ ನೀಡತಕ್ಕದ್ದು.

q) ಸರ್ಕಾರ / ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸುವ ಷರತ್ತು ಹಾಗೂ ನಿಬಂಧನೆಗಳನ್ನು ಪಾಲಿಸತಕ್ಕದ್ದು.

r) ಯೋಜನೆಯ ಕಾಮಗಾರಿ ಅನುಷ್ಠಾನದ ಆರಂಭದಲ್ಲೇ ಅನುದಾನ ಸಹಿತ ಯೋಜನೆಯ ವಿವರಗಳನ್ನೊಳಗೊಂಡ ಇಲಾಖೆ ನಿಗದಿಪಡಿಸಿ ನಿರ್ದಿಷ್ಟಪಡಿಸಿದ ನಾಮಫಲಕವನ್ನು ಕಡ್ಡಾಯವಾಗಿ ಅಳವಡಿಸಿದ್ದನ್ನು ಖಚಿತ ಪಡಿಸಿಕೊಂಡ ನಂತರವೇ ಸಹಾಯಧನ ಬಿಡುಗಡೆ ಮಾಡುವುದು.

s) ಸಹಾಯಧನ ಬಿಡುಗಡೆ ಮಾಡುವ ಪೂರ್ವದಲ್ಲಿ ಈಗಾಗಲೇ ಬಿಡುಗಡೆ ಮಾಡಿದ ಸಹಾಯಧನವು ಪೂರ್ಣ ಪ್ರಮಾಣದಲ್ಲಿ ಬಳಕೆಯಾದ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರ, ಕಾಮಗಾರಿಯ ಛಾಯ ಚಿತ್ರ ಹಾಗೂ ಅನುದಾನದ ಬಳಕೆಯ ಬಗ್ಗೆ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ದೃಢೀಕರಣ ಪತ್ರ ಪಡೆದು ಮುಂದಿನ ಕಂತಿನ ಸಹಾಯಧನ ಬಿಡುಗಡೆ ಮಾಡತಕ್ಕದ್ದು.

t) ಅಂತಿಮ ಕಂತಿನ ಸಹಾಯಧನ ಬಿಡುಗಡೆ ಮಾಡುವಾಗ ಒಟ್ಟಾರೆ ಬಿಡುಗಡೆ ಮಾಡಿದ ಸಹಾಯಧನ ಸಂಪೂರ್ಣ ಬಳಕೆಯ ಪ್ರಮಾಣ ಪತ್ರ ಹಾಗೂ ಕಾಮಗಾರಿಯ ಛಾಯಾ ಚಿತ್ರ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ದೃಢೀಕರಣ ಪ್ರಮಾಣ ಪತ್ರ ಪಡೆಯತಕ್ಕದ್ದು.

ಈ ಆದೇಶವನ್ನು ದಿನಾಂಕ:06.11.2021 ರಂದು ನಡೆದ ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ: ಸಿ:429/2021 ರ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ವೆಂಕಟೇಶಮೂರ್ತಿ)
ಸರ್ಕಾರದ ಉಪ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಜವಳಿ)

PR-831

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59.
VIJAY N M